## 29

# ಪ್ರೀತಿ, ಕಣ್ಣೀರು, ಮತ್ತು ಕ್ಷಮಾಪಣೆ

## ಲೂಕ 7:36-50, ಒಂದು ನಿಕಟ ನೋಟ

ಯೇಸು ಇತರರೊಡನೆ ಊಟಮಾಡುವದನ್ನು ಪ್ರೀತಿಸುವವನಾಗಿದ್ದನು. ಆತನು ತನ್ನ ಶಿಷ್ಯರೊಡನೆ ಊಟಮಾಡಿದನು (ಮಾರ್ಕ 14:14; ಲೂಕ 22:15). ಆತನು ತನ್ನ ಸ್ನೇಹಿತರೊಡನೆ ಊಟಮಾಡಿದನು (ಲೂಕ 10:38-42; ಯೋಹಾನ 12:1, 2). ಆತನು ಸುಂಕದವರೊಡನೆ ಮತ್ತು ಪಾಪಿಗಳೊಡನೆ ಊಟಮಾಡಿದನು (ಲೂಕ 5:29, 30). ಆತನು ಫರಿಸಾಯರ ಜೊತೆಗೂ ಕೂಡಾ ಊಟಮಾಡಿದನು (ಲೂಕ 11:37-54; 14:1-6). ನಮಗೆ ತಿಳಿದ ಪ್ರಕಾರ, ಊಟಕ್ಕಾಗಿನ ಆಹ್ವಾನಕ್ಕೆ ಕ್ರಿಸ್ತನು ಹಿಂದಕ್ಕೆ ತಿರುಗಲಿಲ್ಲ.[1]

ಲೂಕ 7:36-50 ಯೇಸು ಮೊದಲ ಸಾರಿ ಯೇಸು ಒಬ್ಬ ಪರಿಸಾಯನೊಬ್ಬನಿಂದ ಊಟಕ್ಕೆ ಆಹ್ವಾನಿತವಾದದ್ದನ್ನು ಹೇಳುವುದಾಗಿದೆ. ಆಶ್ಚರ್ಯಕರವಾದ ತಿರುವಿನ ಘಟನೆಯು ಅದ್ಭುತವಾದ ಮನತಟ್ಟುವ ಪ್ರೀತಿ ಮತ್ತು ಕ್ಷಮಾಪಣೆಯ ಮೇಲಿನ ಸಂದೇಶವನ್ನು ಯೇಸು ಕೊಡುವುದಕ್ಕೆ ಇಲ್ಲಿ ಸಾಧ್ಯವಾಯಿತು.

### ಗುರುತರವಾದ ವಿನಂತಿ (ವಚನ 36)

"ಫರಿಸಾಯರಲ್ಲಿ ಒಬ್ಬನು ಆತನನ್ನು ತನ್ನ ಜೊತೆಯಲ್ಲಿ ಊಟಮಾಡಬೇಕೆಂದು ಬೇಡಿಕೊಂಡಾಗ ..." (ವಚನ 36) ಎಂದು ಕಥೆಯು ಪ್ರಾರಂಭವಾಗುತ್ತದೆ. ಆ ಫರಿಸಾಯನ ಹೆಸರು ಸಿಮೋನನು (ವಚನಗಳು 40, 43, 44). ಮೂಲಭಾಷೆಯಲ್ಲಿ ಭಾಷಾಂತರವಾದ ಈ ಪದವು "ವಿನಂತಿಸಿಕೊಂಡನು" ಎನ್ನುವದು ಅವಸರವನ್ನು ಸೂಚಿಸುವುದಾಗಿದೆ. ಸಿಮೋನನು ಯೇಸುವನ್ನು ಆಹ್ವಾನಿಸಿದನು (ವಚನ 39) ತಿರುಗಿ ತಿರುಗಿ ಆತನು ಆ ಆಹ್ವಾನವನ್ನು ಒಪ್ಪಿಕೊಳ್ಳುವವರೆಗೂ ಆಹ್ವಾನಿಸಿದನು.

ಯೇಸು ತನ್ನೊಡನೆ ಊಟಮಾಡಬೇಕೆದು ಸಿಮೋನನು ಯಾಕೆ ಕಾತುರವುಳ್ಳವನಾಗಿದ್ದನು? ಇದಕ್ಕೆ ವಿಭಿನ್ನವಾದ ಸೂಚನೆಗಳು ಕೊಡಲ್ಪಟ್ಟಿದೆ. ಬಹುಶಃ ಆ ಫರಿಸಾಯನಿಗೆ ಯೇಸುವು ಮೆಚ್ಚಿಕೆಯಾಗಿರಬಹದು. ಪ್ರತಿಯೊಬ್ಬ ಫರಿಸಾಯನೂ ಯೇಸುವನ್ನು ದ್ವೇಶಿಸುತ್ತಿರಲಿಲ್ಲ (ಯೋಹಾನ 7:45-52; ಲೂಕ 13:31). ನಿಯಮದಂತೆ, ನಾವು ಜನರನ್ನು ಮನೆಗೆ ಆಹ್ವಾನಿಸುವದು ಯಾಕೆಂದರೆ ನಮಗೆ ಅವರ ಸಾಂಗತ್ಯವು ಇಷ್ಟವಾಗುವುದರಿಂದಲೇ. ಈ ಘಟನೆಗಳ ನಂತರದಲ್ಲಿ, ಇದು ಸಿಮೋನನ ಸತ್ ಪ್ರೇರಣೆಯು ಕ್ವಚಿತ್ತಾಗಿ ಕಂಡುಬರುತ್ತದೆ.

ಆತನ ಉದ್ದೇಶವು ಬಹುಶಃ ಇತರ ಫರಿಸಾಯರಂತೆ ಇರಬಹುದು: ಯೇಸುವನ್ನು ಮೋಸಗೊಳಿಸಲು ಪ್ರಯತ್ನಿಸುತ್ತಿರಬಹುದು ಅಥವಾ ಆತನನ್ನು ಹಿಯಾಳಿಸುವಲ್ಲಿ ಆತನಲ್ಲಿ ತಪ್ಪನ್ನು ಕಂಡು ಹಿಡಿಯುವುದು ಆಗಿರಬಹುದು. ಇದು ಸಾಧ್ಯವಾಗಿರಬಹುದು, ಆದರೆ ಈ ವ್ಯಾಖ್ಯಾನದಲ್ಲಿ ಯೇಸುವನ್ನು ಬಲೆಯಲ್ಲಿ ಬೀಳಿಸುವದು ಉದ್ದೇಶಪೂರ್ವಕವಾದ ಪ್ರಯತ್ನವೇ ಹೊರತು ಹೆಚ್ಚಿನದೇನೂ ಅಲ್ಲ ಎಂದು ಸೂಚಿಸುವುದಾಗಿದೆ.

ಸಿಮೋನನ ಪ್ರೇರಣೆಯು, ಮೊದಲ ಎರಡು ಸೂಚನೆಗಳ ಮಧ್ಯದಲ್ಲಿ ಇರುವುದಾಗಿದೆ. ಕರ್ತನ ಬಗೆಗೆ ಜೊತೆ ಫರಿಸಾಯರು ಹೇಳಿದ್ದನ್ನು ಖಚಿತವಾಗಿ ಕೇಳಿರಬಹುದು. ಅದೇ ಸಮಯದಲ್ಲಿ ಯೇಸುವಿನ ಜನಪ್ರಿಯ ಅಭಿಪ್ರಾಯದ ಬಗೆಗೆ ಬಹುಶಃ ಎಚ್ಚರದಿಂದಿರಬಹುದು.

ಸ್ವಲ್ಪ ಮುಂಚೆ, “ಮಹಾ ಪ್ರವಾದಿ ನಮ್ಮಲ್ಲಿ ಎದ್ದಿದ್ದಾನೆ” ಎಂದು ಜನರು ಉದ್ಧರಿಸಿದ ನಾಯಿನ ಊರಿನಲ್ಲಿ ಯೇಸು ಇದ್ದನು (ಲೂಕ 7:16).[2] “ನಿಜವಾಗಿ, ಯಾರೀ ಮನುಷ್ಯನು?” ಎಂಬ ಸಿಮೋನನ ಮನದಲ್ಲಿ ಪ್ರಶ್ನೆಯು ಮೂಡಿಬಂದಿರಬಹುದು.

ಆಮಂತ್ರಣಕ್ಕೆ ಇನ್ನುಳಿದ ಕಾರಣಗಳು ಕೊಡಲ್ಪಟ್ಟಿವೆಯ ಆದರೆ ಸಿಮೋನನ ಉದ್ದೇಶವು ಏನೇ ಆಗಿರಲಿ, ಯೇಸು ಎಲ್ಲವನ್ನು ಅರಿತಿರುವವನು ಆಗಿದ್ದನು (ಯೋಹಾನ 2:25). ಇದು ಇನ್ನೊಂದು ಪ್ರಶ್ನೆಗೆ ಎಡೆಮಾಡಿಕೊಡುವುದಾಗಿದೆ[3]: ಯೇಸು ಯಾಕೆ ಇಂಥ ಸಂಧಿಗ್ಧತೆಗೆ ಯಾಕೆ ಒಪ್ಪಿಕೊಂಡನು? ತಿರುಗಿ ಅನೇಕ ಸಾಧ್ಯತೆಗಳು ಮನದಲ್ಲಿ ಮೂಡುವವುಗಳು ಆಗಿವೆ.

ಸಿಮೋನನು ತಾನು ಯಾರು ಮತ್ತು ತಾನೇನಾಗಿದ್ದೇನೆ ಎಂಬ ವಿಷಯದಲ್ಲಿ ಅನಿಶ್ಚಿತನಾಗಿದ್ದನು ಎಂದು ಖಚಿತವಾಗಿ ತಿಳಿದಿದ್ದನು. ಹೀಗೆ ಆತನು ಸಿಮೋನನಿಗೆ ಸಹಾಯಿಸಲು ಹೋದನು. ಊಟದ ಆರಂಭದಲ್ಲಿ ಇತರರೂ ಕೂಡಾ ಅಲ್ಲಿ ಉಪಸ್ಥಿತರಿದ್ದರು (ಲೂಕ 7:49); ಬಹುಶಃ ಕ್ರಿಸ್ತನು ಅವರಿಗೆ ಬೋಧಿಸಲು ಹೋದನು. ಮುಂದೆ, ಊಟದ ಆರಂಭದಲ್ಲಿ ಏನಾಗುವದೆಂದು ಯೇಸುವಿಗೆ ತಿಳಿದಿರಬಹುದಿತ್ತು:[4] ಆ “ಕೂಟವನ್ನು ಹಾಳುಮಾಡಿದ” ಆ ಸ್ತ್ರೀಯನ್ನು ಆತನು ಪ್ರೋತ್ಸಾಹಿಸಲು ಹೋಗಿರಬಹುದು. ಅಂತಿಮವಾಗಿ ಈಗಾಗಲೇ ಗಮನಿಸಿದಂತೆ ಯೇಸು ಜನರೊಂದಿಗೆ, ಎಲ್ಲಾ ತರದ ಜನರೊಂದಿಗೆ, ಆತನನ್ನು ವಿರೋಧಿಸುವ ಜನರೊಂದಿಗೂ ಕೂಡಾ ಊಟಮಾಡಲು, ಮಾತನಾಡಲು, ಅನ್ಯೋನ್ಯತೆ ಯನ್ನು ಹೊಂದುದವರಲ್ಲಿ ಆನಂದಿಸುವವನಾಗಿದ್ದನು. ಆತನು ತನ್ನ ಶಿಷ್ಯರಿಗೆ ವೈರಿಗಳನ್ನು ಪ್ರೀತಿಸಲು ಕಲಿಸಿದನು (ಮತ್ತಾಯ 5:44); ಇಂಥ ಪ್ರೀತಿಗಾಗಿ ಪ್ರಾಯೋಗಿಕವಾಗಿ ಅಭ್ಯಾಸಿಸಲು ಆತನು ಕೊಟ್ಟಿರಬಹುದು.

ಯೇಸು ಯಾಕೆ ಸಿಮೋನನ ಮನೆಗೆ ಹೋದನು ಎಂಬುದಕ್ಕೆ ಉತ್ತರವು ಬಹುಶಃ ಎಲ್ಲಕ್ಕಿಂತ ಎತ್ತರವಾದದ್ದಾಗಿದೆ. ಮಹತ್ವದ ಅಂಶ ಎಂದರೆ ಯೇಸು ಆಮಂತ್ರಣವನ್ನು ಒಪ್ಪಿಕೊಂಡನು ಮತ್ತು ಫರಿಸಾಯನೊಡನೆ ಊಟಕ್ಕೆ ಹೋದನು ಎಂಬುದೇ.

## ಅತಿಥ್ಯವಿಲ್ಲದ ಮನುಷ್ಯನು (ವಚನಗಳು 36ಬಿ, 44-46)

“ಆತನು ಆ ಫರಿಸಾಯನ ಮನೆಗೆ ಹೋಗಿ ಊಟಕ್ಕೆ ಒರಗಿಕೊಂಡನು” ಎಂದು ವಚನ 36ರ ಕೊನೆಯಲ್ಲಿ ಹೇಳುತ್ತದೆ. ಯೇಸು ಮನೆಯನ್ನು ಪ್ರವೇಶಿಸಿದ ಮತ್ತು ಊಟಕ್ಕೆ ಒರಗಿಕೊಂಡಾಗಿನ ಮಧ್ಯದಲ್ಲಿ ಸಂಭವಿಸಿದ (ಅಥವಾ ಬದಲಾಗಿ, ಸಂಭವಿಸದೆ ಇರದ) ಹೆಚ್ಚಿನದನ್ನು ಈ ಕಥೆಯ ನಂತರದಲ್ಲಿ ನಾವು ಕಲಿಯುವವರಾಗಿದ್ದೇವೆ.

ಆ ದಿನಗಳಲ್ಲಿ, ಅತಿಥಿಯು ಮನೆಯನ್ನು ಪ್ರವೇಶಿಸುವಾಗ ಕೆಲ ವಿಸ್ತೃತವಾದ ಸಾಮಾಜಿಕ ಸಂಪ್ರದಾಯಗಳು ಮತ್ತು ಆಚಾರಗಳು ಶಿಷ್ಟಾಚಾರಗಳು ನಿರ್ದೇಶಿಸಲ್ಪಡುತ್ತಿದ್ದವು. ಮೊದಲು ಅತಿಥೇಯನು ಅತಿಥಿಗೆ ಸ್ವಾಗತದ ಮುತ್ತನ್ನು ಕೊಡಬೇಕಿತ್ತು (ಆದಿಕಾಂಡ 29:13; 45:15; 2 ಸಮುವೇಲ 15:5; 19:39; ಮತ್ತಾಯ 26:49; ಅಪೊಸ್ತಲರ ಕೃತ್ಯಗಳು 20:37; ರೋಮಾಪುರ 16:16). ಸಹಜವಾಗಿ, ಇದು ಗಲ್ಲಕ್ಕೆ ಕೊಡುವ ಮುತ್ತಾಗಿರುತ್ತಿತ್ತು.

ಅತಿಥಿಗೆ ಕಾಲನ್ನು ತೊಳೆದುಕೊಳ್ಳಲು ನಂತರ ಕೆಲವರು ಬುಟ್ಟಿಯಲ್ಲಿ ನೀರನ್ನು ಮತ್ತು ಒರೆಸಿಕೊಳ್ಳಲು ಟಾವೆಲ್‌ನ್ನು ಕೊಡುತ್ತಿದ್ದರು (ಆದಿಕಾಂಡ 18:4; ನ್ಯಾಯಸ್ಥಾಪಕರು 19:21; ಯೋಹಾನ 13:4, 5; 1 ತಿಮೋಥೆ 5:10). ಈ ದಾಸನ ಕಾರ್ಯವು ಹಲವು ಬಾರಿ ಸೇವಕನಿಂದ ನಡೆಸಲ್ಪಡುತ್ತಿತ್ತು, ಯಾಕೆಂದರೆ ಜನರು ಮೆಟ್ಟುಗಳನ್ನು ಧರಿಸಿ ಕೊಳೆಯಾದ ದಾರಿಯಲ್ಲಿ ನಡೆಯುತ್ತಿದ್ದುದರಿಂದ ಈ ಕ್ರಮವು ಅಭ್ಯಾಸದಲ್ಲಿತ್ತು. ಈ ಧರ್ಮಕಾರ್ಯವು ಅತಿಥಿಗೆ ಆರಾಮವನ್ನು ಒದಗಿಸುತ್ತಿತ್ತು, ಅಲ್ಲದೆ ಮತ್ತು ಅತಿಥೇಯನ ಮನೆಯ ರಗ್ಗು ಮತ್ತು ದಿಂಬುಗಳನ್ನು ರಕ್ಷಿಸಲು ಸಹ ಸಹಾಯವಾಗುತ್ತಿತ್ತು.

ಮೂರನೆಯ ಸಂಪ್ರದಾಯವು, ಅಷ್ಟೊಂದು ಸಾಮಾನ್ಯವಾದದ್ದು ಅಲ್ಲ. ಹಲವು ಬಾರಿ ಇದು ಗೌರವಾನ್ವಿತ ಅತಿಥಿಗಳಿಗೆ ಮಾತ್ರ ಕೊಡಲ್ಪಡುತ್ತಿತ್ತು ಅದು ತಲೆ ಮತ್ತು/ಅಥವಾ ಮುಖಕ್ಕೆ ಎಣ್ಣೆಯ ಅಥವಾ ಲೇಪನ ಆಗಿತ್ತು (ನೋಡಿರಿ ಕೀರ್ತನೆ 45:7; 92:10; 104:15; 141:5; ಪ್ರಸಂಗಿ 9:8; ಅಮೋಸ 6:6). ಒಂದು ವೇಳೆ ಅತಿಥಿಯು ಕೆಲ ತಾಸು ಬಿಸಿಲಿನಲ್ಲಿ ನಡೆದು ಸಕಾಗಿ ಬಂದಿದ್ದಾದರೆ ಈ ರೀತಿಯು ಮಾಡುವದು ಸ್ವಾಗತ ಮತ್ತು ಪುನಶ್ಚೇತ ಗೊಳಿಸುವಿಕೆಯೂ ಎರಡೂ ಆಗುತ್ತಿತ್ತು.

ಯೇಸು ಸಿಮೋನನ ಮನೆಗೆ ಬಂದಾಗ ಇಂತಹ ಯಾವುದೇ ಸಂಪ್ರದಾಯಗಳು ಆತನಿಗೆ ಕೊಡಲ್ಪಡಲಿಲ್ಲ. ನಂತರ ಆತನು "ನಾನು ನಿನ್ನ ಮನೆಗೆ ಬಂದಾಗ ನೀನು ನನ್ನ ಕಾಲಿಗೆ ನೀರು ಕೊಡಲಿಲ್ಲ ... ನನಗೆ ಮುದ್ದಿಡಲಿಲ್ಲ ... ನನ್ನ ತಲೆಗೆ ಎಣ್ಣೆ ಹಚ್ಚಲಿಲ್ಲ ..." (ವಚನಗಳು 44-46) ಎಂದು ಹೇಳಿದನು. ಇತರ ಅತಿಥಿಗಳು ಕೂಡಾ ಅಲಕ್ಷಿಸಲ್ಪಟ್ಟಿದ್ದರು (ವಚನ 49) ಎಂಬುದಕ್ಕೆ ಇಲ್ಲಿಯಾವ ಸೂಚನೆಗಳು ಇಲ್ಲ. 44ರಿಂದ 46 ವಚನಗಳಲ್ಲಿನ "ನಾನು" ಮತ್ತು "ನನ್ನ" ಎಂಬ ಪದಗಳು ಕ್ರಿಸ್ತನು ಮಾತ್ರ ಈ ಮೂರು ಅವಮಾನವನ್ನು ಅನುಭವಿಸಿದನು ಎಂದು ಸೂಚಿಸುವವುಗಳು ಆಗಿವೆ.

ಕೆಲ ಕ್ಷಣಗಳವರೆಗೆ ನಿಮ್ಮನ್ನು ಯೇಸುವಿನ ಸ್ಥಾನದಲ್ಲಿರಿಸಿಕೊಳ್ಳಿರಿ. ಸಿಮೋನನ ಮನೆಗೆ ನಿಮ್ಮನ್ನು ಊಟಕ್ಕೆ ಕರೆಯಲಾಗಿದೆ. ವಾಸ್ತವದಲ್ಲಿ, ಆ ಆಮಂತ್ರಣವು ಮುಂದೂಡುತ್ತಾ ಕೊನೆಯಲ್ಲಿ ನೀವೂ ಸಹ ಈ ನಿಮ್ಮ ಸಮಯದಲ್ಲಿ ಆ ಭೇಟಿಗೆ ಹೊಂದಿಕೆಯಾಗಲು ಸಮರ್ಥರಾದಿರಿ. ಹೇಗೋ, ನೀವು ಆತನ ಮನೆಯನ್ನು ತಲುಪಿದಾಗ ನಿಮ್ಮ ಅತಿಥೇಯನು ನಿಮ್ಮನ್ನು ಅಲಕ್ಷಕ್ಕೆ ಒಳಗಾಗಿ ನಿಂತಿದ್ದೀರಿ, ಇದು ಊಟದ ಸಮಯದವರೆಗೂ ಆಗುತ್ತದೆ. ಎಲ್ಲಿ ಒರಗಿಕೊಳ್ಳಬೇಕೆಂಬುದು ನಿಮಗೆ ತಿಳಿಸಲ್ಪಟ್ಟಿರಬಹುದು ತಿಳಿಸಲ್ಪಡದೆ ಇರಬಹುದು. ಬಹುಶಃ ಪ್ರತಿಯೊಬ್ಬರೂ ತಮ್ಮ ತಮ್ಮ ಸ್ಥಾನಗಳಿಗೆ ಬರುವವರೆಗೆ ಕಾಯಲು ಹೇಳಿರಬಹುದು ಮತ್ತು ಅವರು ಬಂದ ನಂತರ ಉಳಿದ ಸ್ಥಾನವನ್ನು ತೆಗೆದುಕೊಳ್ಳಬೇಕು.

ಇಂಥ ಆತಿಥ್ಯವನ್ನು ನಿಮ್ಮ ಸುತ್ತಲಿನ ಯಾವುದೇ ವ್ಯಕ್ತಿಯಿಂದ ಹೊಂದಿದ್ದೀರಾ ಅಥವಾ ಕೊನೆಪಕ್ಷ ಸ್ನೇಹಪರವಲ್ಲದ ಕಾರುಣ್ಯವಿಲ್ಲದ ಜನರಿಂದ ಹೊಂದಿದ್ದೀರಾ? ನೀವು ಬೇರೆಡೆ ಯಲ್ಲಿ ಅಥವಾ ಎಲ್ಲಾದರೂ ಇರಬೇಕು ಎಂದು ಬಯಸಿದ್ದೀದೆಯಾ?[5] ಯೇಸು ಇದೇ ತರಹದ ಭಾವನೆಯನ್ನು ಸಿಮೋನನ ಮನೆಯಲ್ಲಿ ಹೊಂದಿದ್ದನೇ? ಹಾಗೆ ಮಾಡಿದ್ದಾದರೆ, ಆತನು ಅಲ್ಲಿ ಇರಬೇಕಾದ ಆತನ ಉದ್ದೇಶವನ್ನು ತಡೆಗಟ್ಟುವ ಅವಕಾಶವನ್ನು ನೀಡುತ್ತಿರಲಿಲ್ಲ.

## ಅಳುವ ಸ್ತ್ರೀ (ವಚನಗಳು 36-39, 44-46)

ಈ ಕಥೆಯನ್ನು ಮುಂದುವರೆಸುವ ಮುನ್ನ ಕೆಲ ವಿವರಣೆಗಳು ಅವಶ್ಯವಿದೆ. ಯೇಸು "ಊಟಕ್ಕೆ ಒರಗಿಕೊಂಡನು" ಎಂಬ ಹೇಳಿಕೆಯ ಅರ್ಥವೇನು (ವಚನ 36)? ಆಮಂತ್ರಣವಿಲ್ಲದ ಒಬ್ಬ ಅತಿಥಿ ಆ ಕೂಟದಲ್ಲಿ ಬರುವದು ಕೊಂಚ ಕಠಿಣವಲ್ಲವೇ (ವಚನ 37)? ಆಕೆ ಅಲ್ಲಿ ತಲುಪಿದಾಗ ಆಕೆಯು ಯೇಸುವಿನ ತಲೆಯ ಬದಲು ಆತನ ಪಾದಗಳಲ್ಲಿ ತನ್ನನ್ನು ತಾನು ಕಂಡುಕೊಂಡಳು (ವಚನ 38). ಈ ಸನ್ನಿವೇಶವನ್ನು ಸರಿಪಡಿಸುವ ಅಗತ್ಯ ನಮಗಿದೆ.

ಮೊದಲು ಮೇಜಿನ ಸುತ್ತಲೂ ಅತಿಥಿಗಳು ತುಂಬಿರುವುದನ್ನು ನಮ್ಮ ಮನದಲ್ಲಿ ತಂದುಕೊಳ್ಳುವಾ. ಒಬ್ಬನ ಎಡಭಾಗಕ್ಕೆ ಒರಗಿಕೊಳ್ಳುವದು ಊಟಮಾಡುವ ಸಾಮಾನ್ಯ ಪ್ರಕ್ರಿಯೆ ಆಗಿದ್ದು, ಎಡಭುಜದ ಮೂಲಕ ಆಧಾರ ಹೊಂದಿರುತ್ತಿದ್ದರು. ಇದು ಬಲಗೈಯಿಂದ ಆಹಾರವನ್ನು ಎತ್ತಿಕೊಳ್ಳಲು ಇದು ಸಹಾಯ ಮಾಡುತ್ತಿತ್ತು, ತಲೆಯು ಆಹಾರದೆಡೆಗೆ ಇರುತ್ತಿತ್ತು, ಕಾಲುಗಳು ಹೊರಕ್ಕೆ ಚಾಚಿರುತ್ತಿದ್ದವು. ಎರಡು ಇತರ ವಿವರಗಳು ಸಹ ಇಲ್ಲಿ ಸೂಚಿಸಲ್ಪಟ್ಟಿದೆ: ಮೆಟ್ಟುಗಳು ಬಾಗಿಲ ಬಳಿಯಲ್ಲಿ ಬಿಡಲ್ಪಟ್ಟಿದ್ದು ಅವರು ಬರಿಗಾಲಿನಲ್ಲಿರಬೇಕಿತ್ತು, ಮತ್ತು

ಗಂಡಸರ ಹೊರತು ಯಾರೂ ಅಲ್ಲಿರುವಂತಿರಲಿಲ್ಲ. ಹಬ್ಬಗಳಲ್ಲಿ ಸ್ತ್ರೀಯರಿಗೆ ಕೇವಲ ಬಡಿಸುವ ಅಥವಾ ಮನರಂಜನೆಗಾಗಿ ಅವಕಾಶವಿರುತ್ತಿತ್ತು.[6]

ಮುಂದೆ ಪೌರ್ಯಾತ್ಯ ಹಬ್ಬಗಳಲ್ಲಿನ ಸಾಮಾನ್ಯವಾಗಿರುವ ಕೋಲಾಹಲವನ್ನು ನೋಡುವಾ. ಅಲ್ಲಿ ಮಾತು ಮತ್ತು ನಗೆ ಇರುತ್ತಿತ್ತು. ಸೇವಕರು ಬರುತ್ತಾ ಹೋಗುತ್ತಾ ಇದ್ದರು. ಕಪ್ಪುಗಳನ್ನು ತುಂಬುತ್ತಿದ್ದರು, ಒಂದು ಸರದಿ ಆದ ನಂತರ ಇನ್ನೊಂದನ್ನು ತರುತ್ತಿದ್ದರು. ಅಲ್ಲಿನ ಕೋಣೆಯ ಅಥವಾ ಆವರಣದ ಆಚೆಯ ಗೋಡೆಯ ಸುತ್ತಲೂ ಕುತೂಹಲಮಯ ವಾದ ಪ್ರೇಕ್ಷಕರು ಇರುವವರಾಗಿರುತ್ತಾರೆ. ನಾವು ತಿಳಿದಂತೆ ಪಶ್ಚಾತ್ಯ ಜಗತ್ತಿನಲ್ಲಿ[7] ಏಕಾಂತತೆ ಅದು ಅದೇ ಸಮಯದಲ್ಲಿ ಅದಕ್ಕೆ ಸಂಬಂಧಿಸಿದಂತೆ ಪೂರ್ವದಲ್ಲಿಯೂ ಇದೆ. ವಿಶೇಷವಾಗಿ ಹೊಸದಾದ ವ್ಯಕ್ತಿತ್ವವನ್ನು ಅವರು ಕಲಿತಿದ್ದಾದರೆ ಇದು ಬ್ಯಾಂಕ್ವೇಟನಲ್ಲಿ ಒಳನುಗ್ಗುವ ವೀಕ್ಷಕರಿಗೋಸ್ಕರ ಅಸಹವಾದದ್ದೇನಲ್ಲ. ಆದ್ದರಿಂದ ಇದು ಆಮಂತ್ರಣವಿಲ್ಲದ ಪಾಪಿಗೆ ಒಮ್ಮಲೇ ಸರಳವಾಗುವದಕ್ಕೆ ಸಂಬಂಧಿಸಿದ್ದು ಆಗಿದ್ದು ಸಿಮೋನನ ಊಟದ ಆಮಂತ್ರವೇ ಆಗಿದೆ.

ಈ ವಿಷಯಗಳನ್ನು ಮನದಲ್ಲಿಟ್ಟುಕೊಂಡು ವೇದಭಾಗದೊಡನೆ ಮುಂದುವರೆಸೋಣ "ಆಗ ಆ ಊರಲ್ಲಿನ ದುರಾಚಾರಿಯಾದ ಒಬ್ಬ ಹೆಂಗಸು ಫರಿಸಾಯನ ಮನೆಯಲ್ಲಿ ಆತನು ಊಟಕ್ಕೆ ಒರಗಿದ್ದಾನೆಂದು ಗೊತ್ತುಹಿಡಕೊಂಡು ಸುಗಂಧತೈಲದ ಭರಣಿಯನ್ನು ತೆಗೆದುಕೊಂಡು ಬಂದು ..." (ವಚನ 37).

ಈ ಸ್ತ್ರೀಯು "ಪಾಪಿ" ಎಂದು ಕರೆಯಲ್ಪಡುತಿದ್ದಳು. NASBಯ ನನ್ನ ಪ್ರತಿಯಲ್ಲಿ ಟಿಪ್ಪಣಿಯಲ್ಲಿ ಉದಾಹರಣೆಗೆ: "ಅನೈತಿಕವಾದ ಹೆಂಗಸು" ಎಂದಿದೆ. ಯೇಸು ನಂತರದಲ್ಲಿ ಆಕೆಯ ಪಾಪಗಳು "ಬಹಳವಾಗಿದೆ" (ವಚನ 47) ಎಂದು ಹೇಳಿದನು. ಆಕೆಯ ಪಾಪಗಳು ಏನೇ ಇದ್ದರೂ, ಅವುಗಳು ಚೆನ್ನಾಗಿ ತಿಳಿದವು ಆಗಿವೆ. ಅವಳು ದುರಾಚಾರಿಯಾಗಿದ್ದಳು (ವಚನ 39). ಅನೇಕ ವ್ಯಾಖ್ಯಾನಕಾರರು ವಚನ 37ರಲ್ಲಿ "ಪಾಪಿಗಳು" ಎಂಬ ಪದವನ್ನು "ವೈಶ್ಯೆ"[8] ಎಂಬುದಕ್ಕೆ ಸೌಮ್ಯಾರ್ಥವಾಗಿ ಬಳಸಿದ್ದಾರೆ.

ಕಡುಪಾಪಿಯು ಯೇಸುವಿನ ಬಗೆಗೆ ತಿಳಿದುಕೊಂಡದ್ದು ಮತ್ತು ಆಕೆ ಜೀವಿತವು ಆತನೆಡೆಗೆ ತಿರುಗಿಕೊಂಡಿದ್ದು ಕಥೆಯಿಂದ ನಿಶ್ಚಿತವಾದದ್ದಾಗಿದೆ.[9] ಈ ಇಬ್ಬರೂ ಮುಖಾಮುಖಿಯಾಗಿ ಎಂದಿಗೂ ಭೇಟಿಯಾಗಿರಲಿಲ್ಲ, ಆದರೆ ಆತನೊಡನೆ ಮಾತನಾಡಲು ಆಕೆಗೆ ಅನೇಕ ಅವಕಾಶಗಳು ಇದ್ದಿರಬಹುದು.[10] ಪಾಪಿಗಳಿಗಾಗಿನ ಮತ್ತು ಬಹಿಷ್ಕೃತರ ಬಗೆಗೆ ಆತನ ಪ್ರೀತಿಯನ್ನು ಆಕೆಯು ಕಂಡಿದ್ದಳು[11] (ಮತ್ತಾಯ 11:5, 19) ಆತನ ಅಂತಕರುಣೆಯ ಆಮಂತ್ರಣವನ್ನು ಆಕೆ ಕೇಳಿರಬಹುದು.

> ಎಲೈ ಕಷ್ಟಪಡುವವರೆ, ಹೊರೆಹೊತ್ತವರೆ, ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಯನ್ನು ಕೊಡುವೆನು. ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ ಆಗಿರುವುದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು. ಯಾಕೆಂದರೆ ನನ್ನ ನೊಗವು ಮೃದುವಾದದ್ದು; ನನ್ನಹೊರೆಯು ಹೌರವಾದದ್ದು (ಮತ್ತಾಯ 11:28-30).

ಯೇಸುವನ್ನು ನೋಡಬೇಕು ಎಂಬ ಅವಳ ಬಲವಾದ ಇಚ್ಛೆ, ಎಲ್ಲಾ ಗಂಡಸರ ಸಂದರ್ಭವನ್ನು ಬೇಧಿಸುವ ಧೈರ್ಯ, ಅವಳು ಸುರಿಸಿದ ಕಣ್ಣೀರು (ವಚನಗಳು 37, 38) ಇವೆಲ್ಲವುಗಳು ಈ ಸ್ತ್ರೀಯ ಹೃದಯದಲ್ಲಿ ತುಂಬಿಕೊಂಡ ಶಕ್ತಿಯುತವಾದ ಭಾವನೆಗಳಿಗೆ ಪುರಾವೆಯಾಗಿದ್ದವು. ಕ್ರಿಸ್ತನ ಬಗೆಗೆ ತಿಳಿಯುವ ಮೊದಲು ಅವಳ ನಿರೀಕ್ಷೆ ರಹಿತತೆಯನ್ನು ಅರಿಯಲು ಪ್ರಯತ್ನಿಸಿ: ಪ್ರತಿ ಹೊಸದಿನದ ಹೆದರಿಕೆ, ಅವಳಿಗಾಗಿ ಇತರರ ತಿರಸ್ಕಾರ, ಸ್ವ - ತಿರಸ್ಕಾರ ಇವುಗಳಿಂದ ಆಕೆ ಕೂಡಿದ್ದಳು. ನಂತರ ಆಕೆಯು ಯೇಸುವಿನ ಬಗೆಗೆ ಕೇಳಿದಳು

ಮತ್ತು ಸತ್ಯದ ಬೆಳಕು ಅವಳ ಮನದಲ್ಲಿನ ಕತ್ತಲೆಯನ್ನು ತೆಗೆದುಹಾಕಿತ್ತು. ನಂಬಿಕೆ (ವಚನ 50) skepticism ನ್ನು ಸ್ಥಳಾಂತರಿಸಿತು; ದೈಹಿಯ ದುಃಖವು (ವಚನ 38) ಅವಳ ದೈಹಿಕ ದುಃಖವನ್ನು ತೆಗೆದುಹಾಕಿತು (2 ಕೊರಿಂಥ 7:10). ಅವಳ ಜೀವಿತವು ಬದಲಾಯಿತು! ಅಂದೆಂದೂ ಹಿಂದಿನಂತೆ ಆಗದು!

ಆಕೆಯು ಪ್ರತ್ಯಕ್ಷವಾಗಿ ಒಂದು ಸಂಗತಿಯಿಂದ ವಂಚಿತಳಾಗಿದ್ದಳು. ಅದು ಅವಳ ಮೆಚ್ಚುಗೆಯನ್ನು ವ್ಯಕ್ತಪಡಿಸುವ ಅವಕಾಶ. ಯೇಸು ಆ ಸ್ಥಳದಲ್ಲಿದ್ದಾನೆಂದು ತಿಳಿದಾಗ ಆಕೆಯು ಸಿಮೋನನ ಮನೆಗೆ ಧಾವಿಸಿದಳು. ಸುಗಂಧ ತೈಲದ ಶೀಶೆಯನ್ನು ಬಿಗಿಯಾಗಿ ಹಿಡಿದುಕೊಂಡಳು. ಬಹುಶಃ ಅವಳ ವ್ಯಾಪಾರದ ಸಾಧನ ಆದಾಗಿರಬಹುದು, ಆದರೆ ಇಂದು ಅದು ಪ್ರೀತಿ ಮತ್ತು ಕೃತಜ್ಞತೆಯನ್ನು ವ್ಯಕ್ತಪಡಿಸುವ ಮಾಧ್ಯಮವಾಗಿತ್ತು.

ಫರಿಸಾಯನ ಮನೆಗೆ ತಲುಪಿದ ಮೇಲೆ ಗದ್ದಲದ ಅವಸರದ ಹಬ್ಬದ ಆ ಸಂದರ್ಭದಲ್ಲಿ ಯೇಸುವನ್ನು ಮುಟ್ಟುವ ತನಕ ದಾರಿಯನ್ನು ಮಾಡಿಕೊಂಡು ಹೋಗುವುದು ಅವಳಿಗೆ ಕಷ್ಟವೇನೂ ಆಗಲಿಲ್ಲ. ಆತನನಿದ್ದ ಮೇಜಿನ ಸುತ್ತಲೂ ಆಕೆ ನಡೆದಳು. ತನ್ನ ರಕ್ಷಕನ ಹತ್ತಿರದಲ್ಲಿ ನಿಂತುಕೊಂಡಳು, ಉನ್ಮಾದತೆಯು ಅವಳಲ್ಲಿ ತುಂಬಿತುಳುಕಿತು ಮತ್ತು ಅವಳ ಕಣ್ಣೀರು ಮಳೆಯೋಪಾದಿಯಲ್ಲಿ ಹರಿಯಿತು.

ಆಕೆಯ ಕಣ್ಣೀರು ಪ್ರಯಾಣದಿಂದ ಕಲೆಯಾದ ಯೇಸುವಿನ ಪಾದಗಳ ಮೇಲೆ ಬಿದ್ದಾಗ, ಅವು ಕಷ್ಟದ ಧೂಳಿನಿಂದ ಮಿಶ್ರವಾಗಿರಬಹುದು. ಅವಳು ತನ್ನ ತಲೆಗೂದಲನ್ನು ಬಿಚ್ಚಿದಳು ಮತ್ತು ತನ್ನ ಪಾಪದ ಜೊತೆ ಮಣ್ಣಿನ ಕಲೆಯನ್ನೂ ಅವಳು ಅದರಿಂದ ಒರಸತೊಡಗಿದಳು. ಬೆಳದ ಒಬ್ಬ ಯೆಹೂದಿ ಸ್ತ್ರೀಯು ಸಾರ್ವಜನಿಕವಾಗಿ[12] ಕೂದಲನ್ನು ಬಿಟ್ಟುಕೊಂಡಿರುವದು ನಾಚಿಕೆಗೇಡಿನ ಕೆಲಸ ಎಂದು ಪರಿಗಣಿಸಲಾಗುತ್ತಿತ್ತು, ಆದರೆ ನಿಶ್ಚಿತ ವಾದ ಯಾವುದೇ ಅಂತರಗಳಿದ್ದರೂ, ಆಕೆಯು ಯೇಸುವಿನ ಪಾದಗಳನ್ನು ಒರೆಸುವುದನ್ನು ಮುಂದುವರೆಸಿದಳು.

ನಂತರ ಆಕೆಯು ಆತನ ಪಾದಗಳಿಗೆ ಮುದ್ದಿಡಲು ಆರಂಭಿಸಿದಳು, ಕರ್ತನ ಪಾದಗಳಿಗೆ ಮುದ್ದಿಟ್ಟಾಗ, ಅದು ಮೃದುವಾಗಿತ್ತು ಅತಿ ಪ್ರೀತಿಯ ರಾಜಕುಮಾರನ ಶುದ್ಧವಾಗಿ ತೊಳೆಯಲ್ಪಟ್ಟ ಪಾದಗಳು ಆಗಿದ್ದವು ಎಂದು ಯೋಚಿಸಿ ಅಲ್ಲ. ಎಲ್ಲಡೆಯೂ ಪ್ರಯಾಣಿಸುವ ಈ ವಿಶ್ರಾಂತಿ ಬೋಧಕನ ಒರಟಾದ ಬಿರುಸಾದ, ಬಿರುಕುಬಿಟ್ಟ ಪಾದಗಳು ಈ ಸಂದರ್ಭದಲ್ಲಿ ಗಲಿಲಾಯದ ಮಾರ್ಗದ ಧೂಳು ಮತ್ತು ಕೊಳೆಯಿಂದ ಇನ್ನೂ ಮುಚ್ಚಿಹೋಗಿತ್ತು. ಆ ಹೊಲಸಾದ ಕಾಲುಗಳನ್ನು ಪದೇ ಪದೇ ಮುದ್ದಿಸಿದಳು ಎಂದು ವಚನ 45 ಹೇಳುತ್ತದೆ. ಅಂತಿಮವಾಗಿ ತನ್ನ ಶೀಶೆಯನ್ನು ಎತ್ತಿಕೊಂಡಳು, ಅದನ್ನು ತೆರೆದಳು,[13] ಮತ್ತು ಆ ಸುಗಂಧ ತೈಲವನ್ನು ಆತನ ತಲೆಯ ಮೇಲೆ ಮತ್ತು ಪಾದಗಳ ಮೇಲೆ ಹಾಕಿದಳು.

ಸಿಮೋನನ ಔತಣ ಕೂಟದಲ್ಲಿ ಇದರ ಪರಿಣಾಣವನ್ನು ಊಹಿಸುವು ಕಷ್ಟೇವೇನಲ್ಲ. ಆ ಫರಿಸಾಯರು ಸಾರ್ವಜನಿಕವಾಗಿ ಆ ಸ್ತ್ರೀಗೆ ಏನೂ ಮಾಡುವಂತಿರಲಿಲ್ಲ ಎಂಬುದನ್ನು ನೆನಪಿನಿಲ್ಲಿಟ್ಟುಕೊಳ್ಳಿ. ಈ ಸಮುದಾಯದಲ್ಲಿ ಆ ಸ್ತ್ರೀಗೆ ಅತಿ ನಿಂದ್ಯ ವರ್ಚಸ್ಸು ಇದ್ದಿರುವುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ಆ ಸ್ತ್ರೀಯು ಅಳುತ್ತಾ ಒರೆಸುತ್ತಾ ಮತ್ತು ಕಣ್ಣೀರು ಸುರಿಯುತ್ತಾ ಇರುವ ಈ ವಿಲಕ್ಷಣವಾದ ನಡತೆಯನ್ನೂ ಜೊತೆಗೂಡಿಸಿಕೊಂಡು ತನ್ನ ಅವಮಾನಕರ ನಡತೆಯನ್ನು ತನ್ನ ಕೂದಲಿನಲ್ಲಿ ಕೆಳಕ್ಕೆ ಇಳಿಸಿದಳು. ಸಂಭಾಷಣೆಯು ಅಳಿಹೋಯಿತು, ಸಂಶಯವೇ ಇಲ್ಲ, ಮತ್ತು ಪ್ರತಿಯೊಂದು ಕಣ್ಣು ಯೇಸು ಮತ್ತು ಆ ಸ್ತ್ರೀಯ ಮೇಲಿವೆ.

ಈ ಪರಿಸ್ಥಿತಿಯ ಪ್ರತಿಯೊಂದೂ ವಿವರಗಳು ಯೇಸುವಿನ ಮೇಲೆ ಯಾವ ಪರಿಣಾಮವನ್ನು ಬೀರಿದವು? ತನ್ನ ಪಾದದ ಮೇಲೆ ಅವಳ ಕಣ್ಣೀರು ಬೀಳುವ ಅನುಭವ ಆಗುವ ಮೊದಲು ಆ ಸ್ತ್ರೀಯನ್ನು ಎಲ್ಲಾದರು ಕಂಡಿದ್ದನಾ? ಅವಳ ಅತಿಯಾದ ಮತ್ತು ಆ ಸಂಪ್ರದಾಕವಾದ ಕೃತಜ್ಞತೆಗೆ ಆತನ ತತ್‌ಕ್ಷಣದ ಪ್ರತಿಕ್ರಿಯೆಯು ಏನಾಗಿತ್ತು?

ಕ್ರಿಸ್ತನ ಆರಂಭಿಕ ಪ್ರತಿಕ್ರಿಯೆಯ ಬಗೆಗೆ ನಮಗೆ ಯಾವ ಖಚಿತತೆಯು ಇಲ್ಲ, ಆದರೆ ಸಿಮೋನನ ಮೇಲಾದ ಪರಿಣಾಮವು ನಮಗೆ ಹೇಳಲ್ಪಟ್ಟಿದೆ. ಈ ಫರಿಸಾಯನು ತನ್ನ ಮನೆಯಲ್ಲಿ ನಡೆದ ಆ ಅಯೋಗ್ಯವಾದ ಕಾರ್ಯದಿಂದಾಗಿ ಬಹುಶಃ ಮುಜುಗರಕ್ಕೀಡಾಗಿರಬಹುದು - ಆದರೆ ಆತನು ಒಂದು ರೀತಿಯ ತೃಪ್ತಿಯಿಂದ ಸಹ ತುಂಬಿದವನಾಗಿರಬಹುದು. ಯೇಸು ಯಾವ ತರದ ವ್ಯಕ್ತಿಯಾಗಿದ್ದಾನೆ ಎಂಬುದಕ್ಕೆ ಆತನಿಗೆ ಅನೇಕ ಪ್ರಶ್ನೆಗಳು ಇದ್ದವು, ಆ ಪ್ರಶ್ನೆಗಳಿಗೆ ಉತ್ತರವು ಈಗ ಸಿಕ್ಕಿತು. "ಇವಳು ದುರಾಚಾರಿ; ಇವನು ಪ್ರವಾದಿಯಾಗಿದ್ದರೆ ತನ್ನನ್ನು ಮುಟ್ಟಿದ ಹೆಂಗಸು ಇಂಥವಳೆಂದು ಅಂದುಕೊಂಡನು" (ವಚನ 39).

ಸಿಮೋನನಿಗೆ ಸಂಬಂಧಿಸಿದಂತೆ, ಈ ವಾಸ್ತವವು ಸಾಧ್ಯತೆಯಿರುವ ಎರಡು ಸಮಾರೋಪಗಳಿಗೆ ಅವಕಾಶ ಇರಿಸುವುದಾಗಿದೆ: ಆ ಸ್ತ್ರೀಯು ಎಂಥವಳಾಗಿದ್ದಳು ಎಂದು ಯೇಸುವಿಗೆ ತಿಳಿದಿರಲಿಲ್ಲ. ಆದ್ದರಿಂದ ಆತನು ಪ್ರವಾದಿಯಲ್ಲ,[14] ಅಥವಾ ಅವಳು ಯಾರೆಂದು ಆತನು ತಿಳಿದಿದ್ದನು ಆದರೆ ಆತನು ಅದನ್ನು ಲಕ್ಷಕ್ಕೆ ತಗೆದುಕೊಳ್ಳ ಲಿಲ್ಲ. ಆತನು ಒಳ್ಳೆಯ ಮನುಷ್ಯನಾಗಿರಲು ಸಾಧ್ಯವೇ ಇಲ್ಲ.[15] ಯೇಸು ಆ ಸ್ತ್ರೀಯು ಎಂಥವಳೆಂದೂ ಮತ್ತು ಏನಾಗದಿದ್ದಾಳೆಂದೂ ಬಲ್ಲವನಾಗಿದ್ದನು ಎಂದು ಸಿಮೋನನು ಅರಿತುಕೊಳ್ಳಲಿಲ್ಲ. ಸಿಮೋನನು ಯಾರು? ಸಿಮೋನನು ಎಂಥವಳೆಂದೂ ಮತ್ತು ಏನಾಗದಿದ್ದಾಳೆಂದೂ ಬಲ್ಲವನಾಗಿದ್ದನು ಎಂದು ಸಿಮೋನನು ಅರಿತುಕೊಳ್ಳಲಿಲ್ಲ. ಸಿಮೋನನು ಯಾರು? ಸಿಮೋನನು ಎಂಥವನಾಗಿದ್ದಾನೆ ಮತ್ತು ಕೂಡಿಬಂದ ಎಲ್ಲರ ಮುಂದೆ ಏನನ್ನು ತೋರಿಸ ಬೇಕೆಂದಿದ್ದಾನೆ ಎಂಬುದನ್ನೂ ಸಹ ಆತನು ಬಲ್ಲವನಾಗಿದ್ದನು.

## ಒಂದು ಸರಳವಾದ ಕಥೆ (ವಚನಗಳು 40-50)

ತನ್ನ ಅತಿಥೆಯನ ವಿಚಾರವನ್ನು ಅರಿತ "ಯೇಸು, ಸಿಮೋನನೇ, ನಾನು ನಿನಗೆ ಹೇಳ ಬೇಕಾದ ಒಂದು ಮಾತದೆ" ಎಂದನು (ವಚನ 40). ಫರಿಸಾಯನಿಗೆ ಸಂಬಂಧಪಟ್ಟಂತೆ ನೋಡುವುದಾದರೆ, ನಾಟಕವು ಮುಗಿಯಿತು, ಒಗಟು ಬಿಡಿಸಲ್ಪಟ್ಟಿತು. "ಬೋಧಕನ ಹೇಳು"[16] (ವಚನ 40) ಎಂಬಲ್ಲಿ ಆತನ ಪ್ರತಿಕ್ರಿಯೆಯಲ್ಲಿದ್ದ ವ್ಯಂಗವನ್ನು ನೀವು ಗಮನಿಸಿರಬಹುದು.

ನಂತರ ಯೇಸು ಸರಳವಾದ ಚಿಕ್ಕ ಕಥೆಯನ್ನು ಕೇವಲ ಎರಡು ಸಾಲುಗಳುಳ್ಳ ಸಣ್ಣ ಕಥೆಯನ್ನು ಹೇಳಿದನು. ಇದು ಮೂರು ಜನರನ್ನು ಹೊಂದಿದ್ದು ಸಾಧಾರಣವಾದ ವಿಷಯವನ್ನು ಹೊಂದಿತ್ತು: "ಒಬ್ಬ ಸಾಹುಕಾರನಿಗೆ ಇಬ್ಬರು ಸಾಲಗಾರರಿದ್ದರು; ಒಬ್ಬನು ಐನೂರು ಹಣ[17] ಕೊಡಬೇಕಾಗಿತ್ತು, ಮತ್ತೊಬ್ಬನು ಐವತ್ತು ಹಣ ಕೊಡಬೇಕಾಗಿತ್ತು. ತೀರಿಸುವುದಕ್ಕೆ ಅವರಿಗೆ ಗತಿ ಇಲ್ಲದ್ದರಿಂದ ಆ ಇಬ್ಬರಿಗೂ ಸಾಲವನ್ನು ಬಿಟ್ಟುಬಿಟ್ಟನು" (ವಚನಗಳು 41, 42). ಒಂದು ಪಾವಲಿ ಒಂದು ದಿನದ ಸಾಮಾನ್ಯದ ಕೂಲಿಯಾಳುಗಳ ಕೂಲಿಯಾಗಿರುತ್ತಿತ್ತು (ಮತ್ತಾಯ 20:2). ಹೀಗಿದ್ದಲ್ಲಿ ಒಬ್ಬ ಸಾಲಗಾರನು ಸಾಲಕೊಡುವವನಿಗೆ ಎರಡು ತಿಂಗಳ ಸಂಬಂಳವನ್ನು ಹೊಂದಿದ್ದನು, ಇನ್ನೊಬ್ಬನು ಹೆಚ್ಚೂ ಕಡಿಮೆ ಎರಡು ವರ್ಷದಲ್ಲಿ ತಾನು ಮಾಡಬಹುದಾದ ಎಲ್ಲವನ್ನೂ ಹೊಂದಿದ್ದನು![18]

"ಸಾಲ ಕೊಡುವವನ" ಬಗೆಗೆ ನಾವು ಓದುವಾಗ ಆತನು ನಮ್ಮ ನೆರೆಯ ಬ್ಯಾಂಕಿನವನು ಎಂದು ಯೋಚಸದಿರಿ (ಅವರು ಹೆಚ್ಚು ಕಡಿಮೆ ಸ್ನೇಹತ್ವದಿಂದ ಇರುತ್ತಾರೆ ಎಂದು ನಾನು ಯೋಚಿಸುತ್ತೇನೆ). ಹಲವು ಬಾರಿ ಹಣವನ್ನು ಕತ್ತರಿಸುವ, ಕರುಹೃದಯದ ಮತ್ತು ಕ್ರೂರವಾದ ಮುಖವುಳ್ಳ ಲಕ್ಷಣಗಳನ್ನು ಹೊಂದಿದ ವ್ಯಕ್ತಿಗಳ ಬಗೆಗೆ ಯೋಚಿಸಿ: ಇವರುಬಡವರ ಮೇಲೆ ಲೂಟಿ ನಡೆಸುವಂತ, ಘೋರವಾದ ಬಡ್ಡಿಯನ್ನು ಹಾಕುವಂತ, ಹಣವನ್ನು ತುಂಬಲು ಆಗದಂತವರ ಮೇಲೆ ಕನಿಕರವಿಲ್ಲದವರೂ ಆಗಿರುತ್ತಾರೆ.

ಕ್ರಿಸ್ತನು ಕಥೆಯನ್ನು ಮುಂದುವರೆಸಿ "ಹಾಗಾದರೆ ಆ ಇಬ್ಬರಲ್ಲಿ (ಇಬ್ಬರೂ ಸಾಲಗಾರರಲ್ಲಿ) ಯಾವನು ಆ ಸಾಹುಕಾರನನ್ನು (ಸಾಲಕೊಟ್ಟವನನ್ನು) ಹೆಚ್ಚಾಗಿ ಪ್ರೀತಿಸಿಯಾನು"

(ವಚನ 42)[19] ಎಂದು ಕೇಳಿದನು. ಆಗ ಮತ್ತು ಈ ದಿನಗಳಲ್ಲಿ ಹಣಕೊಟ್ಟವರು ಹೆಚ್ಚಾಗಿ "ನನಗೆ ಪ್ರೀತಿಸಬೇಕಾಗಿಲ್ಲ ನನಗೆ ಹಣವು ಬೇಕು" ಎಂದು ಗುಟುರು ಹಾಕುತ್ತಾ ಹೇಳುವವರಾಗಿರು ತ್ತಾರೆ!

ಸಾಲವನ್ನು ಕೊಡದೆ ಇರುವದು ಯಾವಾಗಲೂ ಬಲು ಗಂಭೀರವಾದ ಕೆಲಸವಾಗಿರುತ್ತದೆ.[20] ಸಾಲವನ್ನು ಕೊಡದಿರುವುದಕ್ಕಾಗಿ ಸೆರೆಯಲ್ಲಿ ಹಾಕಲ್ಪಡುತ್ತಿದ್ದರು ಮತ್ತು ಸಾಲವನ್ನು ತೀರಿಸದಿರುವುದಕ್ಕಾಗಿ ಪೀಡಿಸಲ್ಪಡುತ್ತಿದ್ದರು ಎಂದು ಮತ್ತಾಯ 18:23-35 ನಮಗೆ ಹೇಳುವುದಾಗಿದೆ. ಯೇಸುವಿನ ಈ ಸರಳವಾದ ಕಥೆಯು ಇಬ್ಬರ ಸಾಲವನ್ನು ಸಾಲಕೊಟ್ಟವನು ಕ್ಷಮಿಸಿಬಿಟ್ಟನು ಎಂದು ಅನಿರೀಕ್ಷಿತವಾದ ತಿರುವನು ಪಡೆಯಿತು. ಸಾಲಕೊಟ್ಟವನಿಗೆ ಕಾಲನ್ನು ಮುರಿಯುವದು ಮತ್ತು ಬೆನ್ನೆಲಬನ್ನು ಮುರಿಯುವದರ ಬಗೆಗೆ ಅರಿತಿದ್ದನು, ಆದರೆ ಕೆಲಬಾರಿ "ನನ್ನಿಂದ ಏನನ್ನು ಪಡೆದಿದ್ದಿಯೋ ಅದರ ಬಗೆಗೆ ನಿಶ್ಚಿಂತನಾಗಿರು. ಅದನ್ನು ಮರೆತುಬಿಡು!" ಎಂದು ಅವರು ಹೀಗೆಯೂ ಹೇಳಬಹುದು. ಹೇಗೋ ಕ್ರಿಸ್ತನ ಕಥೆಯಲ್ಲಿನ ಸಾಹುಕಾರನು ಹಾಗೆಯೇ ಮಾಡಿದನು.[21]

ನಂತರ ಸಿಮೋನನ ಕಡೆಗೆ ತಿರುಗಿಕೊಂಡು "ಹಾಗಾದರೆ ಆ ಇಬ್ಬರಲ್ಲಿ (ಇಬ್ಬರೂ ಸಾಲಗಾರರಲ್ಲಿ) ಯಾವನು ಆ ಸಾಹುಕಾರನನ್ನು (ಸಾಲಕೊಟ್ಟವನನ್ನು) ಹೆಚ್ಚಾಗಿ ಪ್ರೀತಿಸಿಯಾನು" (ವಚನ 42) ಎಂದು ಕೇಳಿದನು. ಫರಿಸಾಯನಿಗೆ ಬಲು ಬೇಜಾರಾಗಿರಬಹುದು. ಈ ಕಥೆಯು ನಿಸ್ಸಂಶಯವಾಗಿ ಯಾವ ಕೆಲಸಕ್ಕೂ ಬಾರದ್ದು ಮತ್ತು ಪ್ರಶ್ನೆಯು ಸರಳವಾಗಿ ಹುಚ್ಚುಚ್ಚಾದದ್ದು ಎಂದು ತನ್ನ ಮನದಲ್ಲಿ ಅಂದುಕೊಂಡಿರಬಹುದು. "ಯಾವನಿಗೆ ಹೆಚ್ಚಾಗಿ ಬಿಟ್ಟನೋ ಅವನೇ ಎಂದು ಭಾವಿಸುತ್ತೇನೆ" (ವಚನ 43) ಎಂದು ಆತನು ಕೊಟ್ಟ ಉತ್ತರದಲ್ಲಿ ಅವನ ಅಹಂಕಾರದ ಧ್ವನಿಯನ್ನು ಕಾಣಬಹುದಾಗಿದೆ.

ಯೇಸು ಆತನಿಗೆ "ನೀನು ಸರಿಯಾಗಿ ತೀರ್ಪು ಮಾಡಿದಿ" ಎಂದನು (ವಚನ 43). "ತೀರ್ಪು" ಎಂಬ ಪದ ಗಮನಿಸಿರಿ. ಸಿಮೋನನು ಕೇವಲ ಉತ್ತರವನ್ನು ಕೊಡಲಿಲ್ಲ. ತನ್ನಷ್ಟಕ್ಕೆ ತಾನೇ ತೀರ್ಪನ್ನು ಮಾಡಿದನು. ಆತನ ಸ್ವಂತ ಮಾತುಗಳೇ ಆತನಿಗೆ ಮನವರಿಕೆ ಮಾಡಿದವು.

ಆ ಸ್ತ್ರೀಯಡೆಗೆ ತಿರುಗಿಕೊಂಡು ಆ ಫರಿಸಾಯನಿಗೆ ಯೇಸು "ಈ ಹೆಂಗಸನ್ನು ನೋಡಿದೆಯಾ?" (ವಚನ 44) ಎಂದು ಕೇಳಿದನು. ಸಿಮೋನನ ಯೋಚನೆಯನ್ನು ನಾನು ಊಹಿಸಬಲ್ಲೆನು "ಎಂಥ ಹಸ್ಯಸ್ಪದವಾದ ಪ್ರಶ್ನೆಯಿದು! ನಾನು ಅವಳನ್ನು ನೋಡದೇ ಇರಲು ಹೇಗೆ ಸಾಧ್ಯ? ಅವಳು ನನ್ನ ಕೂಟವನ್ನು ಹಾಳುಮಾಡಿದ್ದಾಳೆ ಮತ್ತು ನನ್ನನ್ನು ಮುಜುಗರಕ್ಕೀಡು ಮಾಡಿದ್ದಾಳೆ! ಯೇಸುವಿನ ಪ್ರತಿಕ್ರಿಯೆಯನ್ನು ನೋಡುವುದದನ್ನು ಲಕ್ಷಿಸದೆ ಹೋಗಿದ್ದರೆ ಒಂದೇ ಸಾರಿ ಅವಳನ್ನು ಇಲ್ಲಿಂದ ಹೊರಗೆ ಎಸೆಯುತ್ತಿದ್ದೆ. ನಿಶ್ಚಿತವಾಗಿಯೂ ಅವಳನ್ನು ನೋಡುತ್ತಿದ್ದೇನೆ!" ಹೇಗೋ ಆತನು ನಿಜವಾಗಿಯೂ ಆಕೆಯನ್ನು ನೋಡಿರಲಿಲ್ಲ. ಆತನ ಕಣ್ಣುಗಳು *ಅವಳೇನಾಗಿದ್ದಳು* ಎಂಬುದರಿಂದ ತುಂಬಿಹೋಗಿದ್ದವು. ಈಗ ಅವಳೇನು ಆಗಿದ್ದಾಳೆ ಎಂಬುದನ್ನು ಆತನು ನೋಡಲಿಲ್ಲ "ಜಗತ್ತು ಮನುಷ್ಯನ ಪಶ್ಚಾತ್ತಾಪಪಡುವುದನ್ನು ನಂಬುದಿಲ್ಲ" ಎಂದು ಕವಿ ಟೆನ್ನಿಸನ್ ಈ ರೀತಿ ದುಃಖದಿಂದ ಬರೆಯುತ್ತಾರೆ.[22]

ಆ ಸ್ತ್ರೀಯತ್ತ ನೋಡುತ್ತ, ಆದರೆ ಸಿಮೋನನೊಡನೆ ಮಾತನ್ನು ಯೇಸು ಮುಂದುವರೆಸಿದನು,

> ನಾನು ನಿನ್ನ ಮನೆಗೆ ಬಂದಾಗ ನೀನು ನನ್ನ ಕಾಲಿಗೆ ನೀರನ್ನು ಕೊಡಲಿಲ್ಲ; ಇವಳಾದರೋ ನನ್ನ ಕಾಲುಗಳನ್ನು ಕಣ್ಣೀರಿನಿಂದ ತ್ಯಾವಮಾಡಿ ತನ್ನ ತಲೆಯ ಕೂದಲಿನಿಂದ ಒರೆಸಿದಳು. ನೀನು ನನಗೆ ಮುದ್ದಿಡಲಿಲ್ಲ; ಇವಳಾದರೂ ನಾನು ಒಳಗೆ ಬಂದಾಗಿನಿಂದ ನನ್ನ ಕಾಲಿಗೆ ಮುದ್ದಿಡುವುದನ್ನು ಬಿಟ್ಟಿಲ್ಲ. ನೀನು ನನ್ನ ತಲೆಗೆ ಎಣ್ಣೆಯನ್ನು ಹಚ್ಚಲಿಲ್ಲ; ಇವಳಾದರೋ ಸುಗಂಧ ತೈಲವನ್ನು ಕಾಲಿಗೆ ಹಚ್ಚಿದಳು (ವಚನಗಳು 44ಬಿ-46).

ನಂತರ ಯೇಸು ತಾನು ಹೇಳಿದ ಕಥೆಯನ್ನು ಅನ್ವಯಿಸುತ್ತಾ ಹೀಗೆ ಹೇಳಿದನು. "ಹೀಗಿರಲು ನಾನು ಹೇಳುವ ಮಾತನೆಂದರೆ ಇವಳ ಪಾಪಗಳು ಬಹಳವಾಗಿದ್ದರೂ ಅವು ಕ್ಷಮಿಸಲ್ಪಟ್ಟಿವೆ. ಇದಕ್ಕೆ ಪ್ರಮಾಣವೇನೆಂದರೆ ಇವಳು ತೋರಿಸಿದ ಪ್ರೀತಿ ಬಹಳ. ಆದರೆ ಯಾವನಿಗೆ ಸ್ವಲ್ಪ ಮಾತ್ರ ಕ್ಷಮಿಸಲ್ಪಟ್ಟಿದೆಯೋ ಅವನು ತೋರಿಸುವ ಪ್ರೀತಿಯೂ ಸ್ವಲ್ಪವೇ" (ವಚನ 47).

ವಚನ 41 ಮತ್ತು 42ರಲ್ಲಿನ ಸಾಮ್ಯದತ್ತ ಹಿಂತಿರುಗಿ ನೋಡಿರಿ.[23] ಕಾಫಮನ್‌ರವರು: ಈ ಅನ್ವಯವನ್ನು ಸೂಚಿಸಿದ್ದಾರೆ:

> ಸಾಹುಕಾರ = ನಮ್ಮ ಕರ್ತನಾದ ಯೇಸು ಕ್ರಿಸ್ತ.
> 500 ದಿನಾರು ಸಾಲಪಡೆದ = ಒಬ್ಬ ಪಾಪಿಯಾದ ಸ್ತ್ರೀ.
> 50 ದಿನರು ಪಡೆದವ = ಫರಿಸಾಯ ಅವೆರಡನ್ನೂ ಮರಳಿಸಲಾರದವರು = ಯಾವ
> ಮರ್ತ ಜೀವಿಯು ಆತನ ಕ್ಷುಲ್ಲಕ ಪಾಪಗಳಿಗೂ ಕೂಡಾ ಈಡುಕೊಡಲಾರನು,
> ಆತನ ಉಚಿತವಾಗಿ = ಎರಡನ್ನೂ ಕ್ಷಮಿಸಿಬಿಡುವಂತವುಗಳು ಗೌಣ್ಯವಾದ
> ದೇವರ ಅನುಗ್ರಹವನ್ನು ಒದಗಿಸುವದು ಎಂಬುದರ
> ಅರ್ಥ ಎಲ್ಲರಿಗೂ ಕ್ಷಮಾಪಣೆ ಆಗಿದೆ.

ಸಾಮ್ಯದಲ್ಲಿನ[24] ಪ್ರತಿಯೊಂದೂ ವಿವರ ಮಹತ್ವವನ್ನು ಅರ್ಥೈಸಿಕೊಳ್ಳುವಲ್ಲಿ ಪ್ರತಿಯೊಬ್ಬಮೂ ಜಾಗರೂಕನಾಗಿರಬೇಕು (ಈಪ್ರಕರಣದಲ್ಲಿ, ಉದಾಹರಣೆಗಾಗಿ ಅಪ್ರೀಯವಾದ ಹಣ ಬದಲಾವಣೆಯ ಗುಣಲಕ್ಷಣವನ್ನು ಕರ್ತನು ಹೊಂದಿಲ್ಲ[25]). ಹೇಗೋ ಸೂಚಿಸಲ್ಪಟ್ಟ ಸಮಾನತೆಗಳು ಕುತೂಹಲಮಯವಾಗಿವೆ,

ಕಾಫಮನ್‌ರ ಅನ್ವಯವು ಯೋಗ್ಯವಾಗಿದ್ದದ್ದೇ ಆದರೆ, 450ದಿನಾರಿನ ವಿಭಿನ್ನ ಸಾಲವು *ಸಿಮೋನ ಲೆಕ್ಕಕ್ಕೆ ಇರಬಹುದಾಗಿತ್ತು.* ಫರಿಸಾಯನು ತನ್ನನ್ನು ತಾನು ಪಾಪಿಯಾದ ಸ್ತ್ರೀಗಿಂತ ಹತ್ತುಪಟ್ಟು ನೂರುಪಟ್ಟು, ಅಥವಾ ಸಾವಿರ ಸಾರಿ ಉತ್ತಮನೆಂದು ಪರಿಗಣಿಸಿಕೊಂಡಿದ್ದನು. ಆತನು ನಿಜವಾಗಿಯೂ ಉತ್ತಮನಾಗಿದ್ದನೇ? ಆ ಸ್ತ್ರೀಯು ದೈಹಿಕವಾದ ರೀತಿಯಲ್ಲಿ ದೋಷದಲ್ಲಿದ್ದಳು, ಈತನಾದರೋ ಆತ್ಮೀಕ ಪಾಪದ ದೋಷದಲ್ಲಿದ್ದನು. ಅವಳು ಪಾಪದ ನಿಯೋಗವನ್ನು ಹೊಂದಿದ್ದರೆ ಈತನಾದರೋ ಪಾಪದ ಲೋಪವನ್ನೇ ಹೊಂದಿದ್ದನು. ಈತನಾದರೋ ಪಾಪದ ಸೈನ್ಯವನ್ನೇ ಹೊಂದಿದ್ದನು. ಅವಳು ಬಹುಶಃ ಒಂದು ಪಾಪಕ್ಕಾಗಿ ಗುರುತಿಸಲ್ಪಟ್ಟಿದ್ದಳು, ಈ ಫರಿಸಾಯನಾದರೆ ಅಸಂಖ್ಯಾತ ಪಾಪಗಳಲ್ಲಿದ್ದನು ಅವುಗಳು ಆತನು ಗರ್ವದ, ಸ್ವಕೇಂದ್ರಿಕೃತ, ಪೂರ್ವಾಗ್ರಹ ಸ್ವನೀತಿ ಪೀಡಿತನಾಗಿದ್ದನು, ಆತ್ಮೀಕ ಕುರುಡುತನ ಮತ್ತು ಕಪಟತನದ ಪಾಪದಲ್ಲಿದ್ದನು.

ಈ ಸಾಮ್ಯದಲ್ಲಿ ಸೂಚಿಸಲಾದ ನಿರ್ದಿಷ್ಟ ಹಣವು ಮಹತ್ವದಲ್ಲ. ಆದರೆ ಈ ಇಬ್ಬರೂ ಸಾಲಗಾರರ "ಮರಳಿಸುವುದಕ್ಕೆ ಅಸಮರ್ಥರಾಗಿದ್ದರು" ಎಂಬುದು ಮಹತ್ವದ್ದಾಗಿತ್ತು (ವಚನ 42). ನಾವೆಲ್ಲರೂ ಪಾಪಿಗಳಾಗಿದ್ದೇವೆ (ರೋಮಾಪುರ 3:23), ಯಾವ ಒಳ್ಳೆಯ ಕಾರ್ಯಗಳೂ ಆತನ ಪಾಪದ ಸಾಲವನ್ನು ತೀರಿಸುವುದಕ್ಕೆ ಸಮಾನವಾಗದು (ರೋಮಾಪುರ 6:23). ನಮಗೆ ಎಷ್ಟುಬೇಕಾದಷ್ಟು ಕೊಡುವವನ ಮುಂದೆ ಬರಿಗೈಯಲ್ಲಿ ನಮ್ಮಲ್ಲಿ ಪ್ರತಿಯೊಬ್ಬರೂ ನಿಲ್ಲುವವರಾಗಿರುತ್ತೇವೆ.

ನಾವು ಎಂಥ ನಿರೀಕ್ಷೆಯನ್ನು ಹೊಂದಿದ್ದೇವೆ? ನಮ್ಮ ಒಂದೇ ನಿರೀಕ್ಷೆ ಎಂದರೆ ದೇವರ ಕೃಪಯೆ ಆಗಿದೆ. ಹಾಗೆ ನೋಡಿದರೆ ಸಾಹುಕಾರರು ಎಂದಿಗೂ ಕರುಣೆಯುಳ್ಳವರಾಗಿರುವುದಿಲ್ಲ, ಅದರೆ ದೇವರು ಆಗಿದ್ದಾನೆ. ಪೌಲನು ಹೇಳುವಂತೆ "ಕೃಪೆ, ಕರುಣೆ ಮತ್ತು ಸಮಾಧಾನವು ದೇವರಾದ ತಂದೆಯಿಂದ ಮತ್ತು ನಮ್ಮ ಕರ್ತನಾದ ಯೇಸು ಕ್ರಿಸ್ತನಿಂದಲೆ" (1 ತಿಮೊಥೆ 1:2; 2 ತಿಮೊಥೆ 1:2).

ಸಾಮ್ಯವು ವ್ಯಕ್ತಿಯ ಜೀವಿತದಲ್ಲಿನ ಪಾಪದ *ಮೊತ್ತದ* ಜೊತೆ ವ್ಯವಹರಿಸುವುದಿಲ್ಲ

ಆದರೆ ಅವನ ಹೃದಯದಲ್ಲಿನ ಪಾಪವನ್ನು ಎಚ್ಚರಿಸುವುದಕ್ಕೆ ವ್ಯವಹರಿಸುವದಿಲ್ಲ ಆದರೆ ಅವನ ಹೃದಯದಲ್ಲಿನ ಪಾಪವನ್ನು ಎಚ್ಚರಿಸುವುದಕ್ಕೆ ವ್ಯವಹರಿಸುವುದಾಗಿದೆ.[26] ಈ ಸ್ತ್ರೀಯು ತನ್ನ ಘೋರವಾದ ಪಾಪದ ಬಗೆಗೆ ಎಚ್ಚರದಿಂದಿದ್ದಾಳೆ. ಇದು ಅವಳ ಕಣ್ಣೀರಿನಿಂದ ಸಾಕ್ಷಿಯಾಗಿದೆ. ಕ್ರಿಸ್ತನಿಗಾಗಿನ ಅವಳ ಪ್ರೀತಿ ಹೊರಸೂಸಿದೆ. ಇದಕ್ಕೆ ವ್ಯತ್ಯಾಸವೆಂಬಂತೆ ಸಿಮೋನನು ತನ್ನ ವೈಯಕ್ತಿಕ ಪಾಪದ ಬಗೆಗೆ ಯಾವ ಎಚ್ಚರಿಕೆಯನ್ನೂ ಹೊಂದಿಲ್ಲ, ತಪ್ಪೆಂದು ಯೋಚಿಸುತ್ತಿಲ್ಲ, ಪ್ರೀತಿಯನ್ನು ವ್ಯಕ್ತಪಡಿಸುವ ಗೋಡಿಗೂ ಹೋಗುತ್ತಿಲ್ಲ. ಒಬ್ಬರು ಹೀಗೆ ಹೇಳಿದ್ದಾರೆ. "ದೊಡ್ಡ ಪಾಪ ಯಾವುದೆಂದರೆ ಪಾಪವಿಲ್ಲವೆಂದು ಮನವರಿಕೆಮಾಡಿಕೊಂಡಿರುವದು" ಆಗಿದೆ.[27]

ಯೇಸುವಿನ ಅತಿಥೇಯನು ಆತನ ಗದರಿಕೆಗೆ ಹೇಗೆ ಪ್ರತಿಕ್ರಯಿಸಿದನು? ಬಹುಶಃ ಆ ಫರಿಸಾಯನು ಮಾತಿಲ್ಲದವನಾದನು. ಕೊನೇಪಕ್ಷ ಪ್ರತಿಕ್ರಿಯೆಯ ಯಾವ ದಾಖಲೆಗಳೂ ಅಲಿಲ್ಲ.

ನಂತರ ಕ್ರಿಸ್ತನು ಮೊದಲಬಾರಿ ಆ ಸ್ತ್ರೀಯೊಡನೆ ನೇರವಾಗಿ ಮಾತನಾಡುತ್ತಾನೆ, "ನಿನ್ನ ಪಾಪಗಳು ಕ್ಷಮಿಸಲ್ಪಡುತ್ತಿದೆ" ಎಂದು ಹೇಳಲಿಲ್ಲ ಬದಲಾಗಿ "ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ" (ವಚನ 48). ಆತನು ಆಕೆಗೆ "ನಿನ್ನ ಪಾಪಗಳು ಕ್ಷಮಿಸಲ್ಪಡುತ್ತಿವೆ" ಎಂದು ಹೇಳಲಿಲ್ಲ ಬದಲಾಗಿ "ನಿನ್ನ ಪಾಪಗಳು (ನೀನು ಮಾಡಿದ ಎಲ್ಲಾ ಪಾಪಗಳು) ಕ್ಷಮಿಸಲ್ಪಟ್ಟಿವೆ" ಎಂದು ಹೇಳಿದನು. ಈಗಾಗಲೇ ಸೂಚಿಸಿದಂತೆ, ಅವಳ ಪಾಪಗಳು ಕ್ಷಮಿಸಲ್ಪಟ್ಟಿರುವದು ಭೂತಕಾಲದಲ್ಲಿಯೇ, ಆದರೆ ಯೇಸು ಆ ಕ್ಷಮಾಪಣೆಯ ಭರವಸವನ್ನು ಆಕೆಗೆ ಈಗ ಕೊಡುತ್ತಿದ್ದಾನೆ. ಯೇಸುವಿನ ಈ ಹೇಳಿಕೆಯನ್ನು *The Jerusalem Bible* ಹೀಗೆ ವ್ಯಾಖ್ಯಾನಿಸಿದೆ. "... ಇವಳ ಪಾಪಗಳು ಬಹಳವಾಗಿದ್ದರೂ ಅವು ಕ್ಷಮಿಸಲ್ಪಟ್ಟಿವೆ. ಇದಕ್ಕೆ ಪ್ರಮಾಣವೇನೆಂದರೆ ಇವಳು ತೋರಿಸಿದ ಪ್ರೀತಿ ಬಹಳ" (ವಚನ 47).

ನಾವು ಹೊಂದುವ ಕ್ಷಮಾಪಣೆಯಲ್ಲಿ ಪ್ರೀತಿಯು ಬಹು ಮಹತ್ವದ ಭಾಗವಾಗಿದೆ (ಯೋಹಾನ 14:15; 1 ಯೋಹಾನ 5:3), ಆದರೆ ಈ ಕಥೆಯಲ್ಲಿ ವಿವರಿಸಿದಂತೆ ಕ್ಷಮಿಸುವಂತಹದಕ್ಕೆ ಇರುವ ಮೆಚ್ಚುಗೆಯು ಪ್ರೀತಿಯನ್ನು ಉತ್ಪಾದಿಸುವುದಾಗಿದೆ; ಆದರೆ ಯಾರು ಹೆಚ್ಚಾಗಿ ಕ್ಷಮಿಸಲ್ಪಟ್ಟಿರುತ್ತಾರೋ ಅವರು ಹೆಚ್ಚು ಪ್ರೀತಿಯನ್ನು ಹೊಂದಿದ್ದಾರೆ, "ಆದರೆ ಯಾವನಿಗೆ ಸ್ವಲ್ಪ ಮಾತ್ರ ಕ್ಷಮಿಸಲ್ಪಟ್ಟಿದೆಯೋ ಅವನು ತೋರಿಸುವ ಪ್ರೀತಿಯೂ ಸ್ವಲ್ಪವೇ" (ಲೂಕ 7:47).

ಯೇಸು ಆ ಸ್ತ್ರೀಗೆ ಅವಳ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ಹೇಳಿದಾಗ, ಇತರ ಅತಿಥಿಗಳು ಹೇಯವಾಗಿ ಮಾತನಾಡಿದರು. "ಪಾಪಗಳನ್ನೂ ಸಹ ಕ್ಷಮಿಸಿಬಿಡುವವನು ಇವನಾರು?" ಎಂದು ತಮ್ಮಲ್ಲಿ ಗೊಣಗಿಕೊಂಡರು (ವಚನ 49).[28] ಪಾಪಗಳನ್ನು ಕ್ಷಮಿಸಿಬಿಡುವದು ದೇವರೊಬ್ಬನದೇ ಪರಮಾಧಿಕಾರ ಎಂಬುದು ಅವರ ಮನದಲ್ಲಿ ಇತ್ತು.[29]

ಇತರರನ್ನು ಅಲಕ್ಷಿಸುತ್ತಾ ಯೇಸು ಆ ಸ್ತ್ರೀಗೆ "ನಿನ್ನ ನಂಬಿಕೆಯೇ ನಿನ್ನನ್ನು ರಕ್ಷಿಸಿ ಅದೆ" ಎಂದು ಹೇಳಿದನು (ವಚನ 50). ಅವಳ ನಂಬಿಕೆಯು ಯೇಸುವನ್ನು ನೋಡಿದ್ದರಿಂದ ಮತ್ತು ಆತನನ್ನು ಕೇಳಿದ್ದರಿಂದ ಬಂದಿತ್ತು (ರೋಮಾಪುರ 10:17). ಈ ಆ ನಂಬಿಕೆಯು ವ್ಯಕ್ತವಾಗುತ್ತಾ ಇದೆ. ಆಕೆಯು ಗಲಾತ್ಯ 5:6ರಲ್ಲಿನ "ಪ್ರೀತಿಯಿಂದ ಕೆಲಸ ನಡಿಸುವ ನಂಬಿಕೆಯಿಂದಲೇ ಪ್ರಯೋಜನವಾಗುವ" (ತತ್ವವನ್ನು ಪ್ರಾಯೋಗಿಸುತ್ತಾ ಇದ್ದಾಳೆ).

ನಂತರ ಯೇಸು ಆಕೆಗೆ "ಸಮಾಧಾನದಿಂದ ಹೋಗು" ಎಂದು ಹೇಳಿದನು (ಲೂಕ 7:50). ಅಕ್ಷರ ಸಹ ಆತನು "ಸಮಾಧಾನದಲ್ಲಿ ಹೋಗು" ಎಂದು ಹೇಳಿದನು.[30] ಹೃದಯ ಮತ್ತು ಮನಸ್ಸಿನ ಶಾಂತಿಯು ಅವಳ ಹಿಂದಿನ ಜೀವಿತದಲ್ಲಿ ಕಳೆದು ಹೋಗಿತ್ತು ಆದರೆ ಆಗ ಅವಳಿಗೆ ಹೊಸ ಆರಂಭವು ಕೊಡಲ್ಪಡುತ್ತಾ ಇದೆ (2 ಕೊರಿಂಥ 5:17; ರೋಮಾಪುರ 5:1).

ಆ ಸ್ತ್ರೀಯ ಪಾಪದ ಮೇಲೆ ನುಣುಪು ಬರುವಂತೆ ಮಾಡುತ್ತಿಲ್ಲ ಎಂದು ನಾನಿಲ್ಲಿ ಸ್ಪಷ್ಟ

ಪಡಿಸುತ್ತಿದ್ದೇನೆ. ಆತನು ಅವನ್ನು "ಬಹಳ" ಎಂದು ಕರೆದನು (ಲೂಕ 7:47). ಅವಳ ಪಾಪಗಳನ್ನು ಆತನು ಕ್ಷುಲ್ಲಕವಾದ್ದನ್ನು ಹೊರಗೆ ಹಾಕುವಂತ ಮಾಡುವ ಬದಲು, ಪಾಪವನ್ನು ಬಿಟ್ಟುಬಿಡುವ ಪ್ರೇರಣೆಯನ್ನು ಆಕೆಗೆ ಕೊಟ್ಟನು. ನಂತರ ಇನ್ನೊಂದು ಸಂದರ್ಭದಲ್ಲಿ ಇನ್ನೊಬ್ಬ ಪಾಪಿಯಾದ ಹೆಂಗಸಿನೊಡನೆ ಯೇಸು ಸಂಘರ್ಷಕ್ಕಿಳಿದಾಗ ಆತನು ಆಕೆಗೆ ಹೋಗಿಬರಲು ತಿಳಿಸುತ್ತಾನೆ, ಆತನು ಆಕೆಗೆ "ಇನ್ನು ಮೇಲೆ ಪಾಪ ಮಾಡಬೇಡ" ಎಂದು ಹೇಳಿದನು (ಯೋಹಾನ 8:11). ಈ ಸಂದರ್ಭದಲ್ಲಿ ಅದೇ ರೀತಿಯ ಎಚ್ಚರಿಕೆಯು ಇಲ್ಲಿ ಸೂಚಿಸಲ್ಪಟ್ಟಿದೆ.

## ಪ್ರೀತಿಯ ಮೇಲಿನ ಪಾಠ

ಇದಕ್ಕಾಗಿ ಯೇಸು ಸಿಮೋನನನ್ನು ಗದರಿಸಿದನೇ? ಆ ಕ್ಷಣದಿಂದ ಆ ಸ್ತ್ರೀಯು ದೈವೀಕ ಜೀವಿತವನ್ನು ಜೀವಿಸಿದಳೇ? ಹಾಗಾಗಬೇಕೆಂದು ನಾವು ನಿರೀಕ್ಷಿಸುವವರಾಗಿದ್ದೇವೆ, ಆದರೆ ವೇದಭಾಗವು ಹಾಗೆ ಹೇಳುವುದಿಲ್ಲ. ಬೈಬಲ್ ನಮ್ಮ ಕುತೂಹಲವನ್ನು ತಣಿಸುವುದಕ್ಕೆ ಬರೆಯಲ್ಪಟ್ಟಿಲ್ಲ; ಅಥವಾ ಮೂಲವಾದ ಭಾಗಿದಾರರನ್ನು ಖಂಡಿಸುವುದಕ್ಕಾಗಲಿ ಅಥವಾ ಶ್ಲಾಘಿಸುವುದಕ್ಕಾಗಲೀ ಇರುವ ಕಥೆಯೂ ಅಲ್ಲ. ಬದಲಾಗಿ ನಮ್ಮಲ್ಲಿ ಪ್ರತಿಯೊಬ್ಬರೂ ನಮ್ಮ ಹೃದಯವನ್ನು ಮತ್ತು ಜೀವಿತವನ್ನು ಪರೀಕ್ಷಿಸಿಕೊಳ್ಳುವ ಕಾರಣಕ್ಕಾಗಿ ದಾಖಲಾದದ್ದಾಗಿದೆ. ಈ ಮುಂದಿನ ಪ್ರಶ್ನೆಗಳನ್ನು ನಮ್ಮಲ್ಲಿ ಪ್ರತಿಯೊಬ್ಬರೂ ನಮ್ಮನ್ನು ಕೇಳಿಕೊಳ್ಳೋಣ.

(1) *ನನ್ನ ಪಾಪದ ಘೋರತೆಯ ಬಗೆಗೆ ನಾನು ಎಚ್ಚರದಿಂದಿದ್ದೇನೆಯಾ?* ಸಿಮೋನನು ಸಾಮಾಜಿಕ ಗೌರವಾರ್ಹತೆಯೊಂದಿಗೆ ಹೊರೆಯಿಲ್ಲದವನಾಗಿದ್ದನು. ನನ್ನನ್ನು ಅಪಾರ್ಥಮಾಡಿಕೊಳ್ಳಬೇಡಿರಿ: ಸಾಮಾಜಿಕ ಗೌರವಾರ್ಹತೆಯು ಸಂಕಲ್ಪಿತವಾದದ್ದಾಗಿದೆ, ಆದರೆ ನೀತಿವಂತಿಕೆಗೆ ಅಯೋಗ್ಯವಾದ ಬದಲಿಯಾಗಿದೆ. ತನ್ನ ಪಾಪವನ್ನು ಅರಿತುಕೊಳ್ಳುವದಕ್ಕೆ ಇಷ್ಟವಿರುವ ದೈವಿಕವಲ್ಲದ ವ್ಯಕ್ತಿಯ ಹೃದಯವನ್ನು ತಲುಪುವದಕ್ಕಿಂತ ಒಬ್ಬ ಪಾಪಿಯ ಹೃದಯವನ್ನು ತಲುಪುವದು ಅಪಾರ ಕಠಿಣವಾಗಿದೆ. ನಮ್ಮಲ್ಲಿ ಪ್ರತಿಯೊಬ್ಬರೂ "ನನ್ನ ಸಾಲವು ಬಹಳ, ಓ ಕರ್ತನೇ" ಎಂದು ಹೇಳುವಾ.

(2) *ನನ್ನ ಪಾಪಗಳು ಕ್ಷಮಿಸಿರುವುದರ ಅಚ್ಚರಿಗಾಗಿ ನಾನು ಎಚ್ಚರದಿಂದಿದ್ದೇನೆಯೇ?* ಈ ವಾರದ ಓದುವಿಕೆಯಲ್ಲಿ, ಯೇಸು ಅನೇಕ ಅಚ್ಚರಿ ಕಾರ್ಯಗಳನ್ನು ಮಾಡಿದ್ದಾನೆ. ಆತನು ಒಬ್ಬ ಪ್ರಧಾನನ ಸೇವಕನನು ಸ್ವಸ್ಥಮಾಡಿದನು; ಸತ್ತವನನ್ನು ಎಬ್ಬಿಸಿದನು - ಆತನು ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು - ಆದರೆ ಆತನು ಮಾಡಿದ ಬಲು ಮಹತ್ವದ ಕಾರ್ಯವೆಂದರೆ ಶಾಂತಿ ಮತ್ತು ಕ್ಷಮಾಪಣೆಯನ್ನು ಹುಡುಕುತ್ತಿರುವ ಸ್ತ್ರೀಗೆ ಸಹಾಯಿಸಿದನು.

ಇಬ್ಬರು ಸಾಲಗಾರರ ಸಾಮ್ಯವು ನೈಜತೆ ಜೊತೆ ಸಮಾನತೆಯನ್ನು ಹೊಂದಿರುವುದನ್ನು ನಾನು ಈಗಾಗಲೇ ಸೂಚಿಸಿದ್ದೇನೆ. ಇನ್ನೊಂದು ಉದಾಹರಣೆಯು ಇಲ್ಲಿದೆ: ಆ ಸಾಹುಕಾರನು "ನಿಮ್ಮ ಸಾಲವು ಕ್ಷಮಿಸಲ್ಪಟ್ಟಿದೆ" ಮತ್ತು ನಷ್ಟವನ್ನು ತೆಗೆದುಕೊಳ್ಳಿ ಎಂದು ಮಾತ್ರ ಹೇಳಿದನು. ದೇವರು ಹಾಗೆ ಮಾಡಲಾರನು. ಬದಲಾಗಿ ನಮ್ಮ ಪಾಪದ ಸಾಲವು ತುಂಬಲ್ಪಡಬೇಕು ಅದು ಶಿಲುಬೆಯ ಮೇಲೆ ಆತನ ಮಗನ ಮರಣದ ಮೂಲಕ ಸಂದಾಯವಾಗಬೇಕು (ಯೋಹಾನ 3:16; 2 ಕೊರಿಂಥ 5:21; ಕೊಲಸ್ಸೆ 2:14). ನಮ್ಮಲ್ಲಿ ಪ್ರತಿಯೊಬ್ಬರ "ವರ್ಣಿಸಲಶಕ್ಯವಾದ ದೇವರವರಕ್ಕಾಗಿ ಆತನಿಗೆ ಸ್ತೋತ್ರ" ಎಂದು ಹೇಳುವಾ (2 ಕೊರಿಂಥ 9:15).

(3) *ಹೆಚ್ಚಾಗಿ ಕ್ಷಮಾಪಣೆಯನ್ನು ಹೊಂದಿದ ನಾನು, ಹೆಚ್ಚಾಗಿ ಪ್ರೀತಿಸಬಲ್ಲೆನೆ?* ಒಂದು ವೇಳೆ ಶಿಲುಬೆಯ ಕಥೆಯು ಸಾಮಾನ್ಯ ಸ್ಥಾನಕ್ಕೆ ಬರುವುದಾದರೆ, ನಮ್ಮ ಹೃದಯವು ಎಂದೂ ಭಾವನಾತ್ಮಕವಾದ ಭಾವನೆಗಳಿಂದ ತುಂಬಿರುತ್ತಿರಲಿಲ್ಲ. ಯೇಸು ನಮ್ಮನ್ನು ಪ್ರೀತಿಸಿದನು ಎಂಬುದನ್ನು ನಾವು ಅರಿತುಕೊಳ್ಳಬೇಕು (ರೋಮಾಪುರ 8:37) ಮತ್ತು ನಾವು ಪ್ರೀತಿಸುವುದನು ಮುಂದುವರೆಸುವಾ (ಪ್ರಕಟನೆ 1:5). ಆತನಿಗಾಗಿನ ನಮ್ಮ ಅಕ್ಷರತೆಯ,

ದಿನದಿಂದ ದಿನಕ್ಕೆ ಹೊಸದಾಗಬೇಕು. ನಮ್ಮಲ್ಲಿ ಪ್ರತಿಯೊಬ್ಬರೂ "ನಮ್ಮ ತಣ್ಣನೆಯ ಹೃದಯವನ್ನು ಬಿಸಿ ಮಾಡು ಕರ್ತನೆ" ಎಂದು ಹೇಳುವಾ!

(4) *ನನ್ನ ಪ್ರೀತಿಯು ವ್ಯಕ್ತಪಡಿಸಲ್ಪಡುತ್ತಾ ಇದೆಯಾ?* ಆ ಸ್ತ್ರೀಯ ಸಂತಸದ ಹೊಯ್ದಾಡುವ ಸ್ಥಿತಿಯು ಸಿಮೋನನ ಮನೆಯಲ್ಲಿ ಉಪಸ್ಥಿತವಿದ್ದವರನ್ನು ಗೊಂದಮಯವಾಗಿಯೂ ಮತ್ತು ಮುಜುಗುರಪಟ್ಟು ಕೊಳ್ಳುವಂತೆ ಮಾಡಿತು. ಕೆಲವರು ಆತನ ಬುದ್ಧಿಸ್ವಾಸ್ಥತೆಯ ಬಗೆಗೆ ಅಚ್ಚರಿಗೊಂಡಿರಬಹುದು. ನಿಜ ಪ್ರೀತಿಯು ಬೆಲೆಯನ್ನು ಎಣಿಸದು. ಇದು ವೈಪರಿತ್ಯದಲ್ಲಿ ಭಾವನೆಯನ್ನು ಹುಡುಕುವುದಾಗಿದೆ. ನಮ್ಮಲ್ಲಿ ಪ್ರತಿಯಬ್ಬರೂ "ಓ ಕರ್ತನೆ ನಮ್ಮ ಪ್ರೀತಿಯನ್ನು *ತೋರಿಸಲು* ಸಹಾಯಿಸು" ಎಂದು ಪ್ರಾರ್ಥಿಸುವಾ!

## ಮುಕ್ತಾಯ

ಈ ಪ್ರಸಂಗದ ಆರಂಭದಲ್ಲಿ, ನಾನು ಗಮನಿಸಿದಂತೆ, ನಾನು ತಿಳಿದ ಪ್ರಕಾರ, ಯೇಸು ಊಟದ ಆಹ್ವಾನಕ್ಕೆ ಮುಖ ತಿರುಗಿಸುತ್ತಿರಲಿಲ್ಲ. ಇದು ಪ್ರಕಟಣೆ 3:20ರಲ್ಲಿನ, "ಇಗೋ, ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ; ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟಮಾಡುವೆನು, ಅವನು ನನ್ನ ಸಂಗಡ ಊಟಮಾಡುವನು" ಎಂಬುದು ಅದ್ಭುತವಾದ ಆಮಂತ್ರಣವನ್ನು ನಮಗೆ ನೆನಪಿಸುವುದಾಗಿದೆ.[31]

ಒಂದು ವೇಳೆ ನೀವು ಕ್ರಿಸ್ತನ ಆಮಂತ್ರಣವನ್ನು ಎಂದಿಗೂ ವಿಸ್ತರಿಸದಿದ್ದರೆ, ನಿಮ್ಮ ನಂಬಿಕೆಗೆ ಪ್ರೀತಿಯ ಜೊತೆ ಕೆಲಸ ಮಾಡುವದು ಅವಶ್ಯವಿದೆ (ನೋಡಿ ಗಲಾತ್ಯ 5:6). ಆತನ ಚಿತ್ತಕ್ಕೆ ವಿಧೇಯನಾಗುವ ಮೂಲಕ ನಿಮ್ಮ ನಂಬಿಕೆ ಮತ್ತು ಪ್ರೀತಿಯನ್ನು ವ್ಯಕ್ತಪಡಿಸಿ (ಯೋಹಾನ 14:15; ಮತ್ತಾಯ 7:21). ನಿಮ್ಮ ಪಾಪಗಳಿಗೆ ಪಶ್ಚಾತ್ತಾಪಪಡಿರಿ (ಲೂಕ 13:3); ದೇವರು "ಮುರಿದ ಮತ್ತು ಜಜ್ಜಿದ ಹೃದಯವನ್ನು ಮೆಚ್ಚುವವನಾಗಿದ್ದಾನೆ" (ಕೀರ್ತನೆ 51:17). ಕರ್ತನಲ್ಲಿ ನಿಮ್ಮ ನಂಬಿಕೆಯನ್ನು ಅರಿಕೆಮಾಡಿರಿ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆಗಾಗಿ ದೀಕ್ಷಾಸ್ನಾನಮಾಡಿಸಿಕೊಳ್ಳಿರಿ (ನೀರಿನಲ್ಲಿ ಮುಳುಗಿ) (ಅಪೊಸ್ತಲರ ಕೃತ್ಯಗಳು 2:38; 8:37).

ಒಬ್ಬ ಅವಿಶ್ವಾಸಿಯಾದ ಕ್ರೈಸ್ತನಾದ ನೀನು ಕ್ರಿಸ್ತನನ್ನು ನಿನ್ನ ಜೀವಿತದಿಂದ ಹೊರಗೆ ಹೊಕಿರುತ್ತಿ, ಪಶ್ಚಾತ್ತಾಪದ ಮೂಲಕ ಅರಿಕೆ ಮಾಡುವ ಮೂಲಕ ಪ್ರಾರ್ಥನೆಯ ಮೂಲಕ ಆತನನ್ನು ನಿನ್ನ ಜೀವಿತಕ್ಕೆ ಮರಳಿ ಆಮಂತ್ರಿಸಬಹುದು (1 ಯೋಹಾನ 1:9; ಅಪೊಸ್ತಲರ ಕೃತ್ಯಗಳು 8:22; ಯಾಕೋಬ 5:16). "ಆದ್ದರಿಂದ ನೀನು ಆಸಕ್ತನಾಗಿರು; ದೇವರೆಡೆಗೆ ತಿರುಗಿಕೋ" (ಪ್ರಕಟನೆ 3:19).

ಕ್ರಿಸ್ತನು ನಿನಗೆ ಏನುಮಾಡಿದ್ದಾನೆ ಎಂಬುದರ ಬಗೆಗೆ ನೀನು ಎಂದಿಗೂ ಸ್ತುತಿಯನ್ನು ವ್ಯಕ್ತಪಡಿಸದೇ ಹೋದದ್ದಾದರೆ, ಈಗಲೇ ಸಮಯವಿದೆ ಅದನ್ನು ಮಾಡು! (ನೋಡಿರಿ 2 ಕೊರಿಂಥ 6:2.)

ಟಿಪ್ಪಣಿಗಳು

[1]ಇದನ್ನು ಬೋಧಿಸುವಾಗ, ಹಾಸ್ಯಲೇಪನವನ್ನು ಕೊಡಲಿಚ್ಚಿಸುತ್ತೇನೆ. "ಈ ದೃಷ್ಟಿಯಲ್ಲಿ ನನ್ನ ಹೆಂಡತಿಯೂ ಯೇಸುವಿನಂತಿದ್ದಾಳೆ." [2]ಸಿಮೋನನು ಬಳಸಿದ ಪ್ರವಾದಿ (ಲೂಕ 7:39) ಎಂಬ ಪದವು ನಾಯೀನ ಊರಿನಲ್ಲಿ ಬಳಸಿದ ಪದವನ್ನು ಆತನು ಕೇಳಿದ್ದಾನೆ ಎಂಬುದನ್ನು ಸೂಚಿಸುವುದಾಗಿದೆ. [3]Barclay ರವರು ಸಿಮೋನನನ್ನು "ಪ್ರಮುಖ ವ್ಯಕ್ತಿಗಳ ಸಂಗ್ರಾಹಕ" ಎಂದು

ಸೂಚಿಸುವವರಾಗಿದ್ದಾನೆ. (William Barclay, *The Gospel of Luke*, rev. ed., The Daily Study Bible Series [Philadelphia: Westminster Press, 1975], 94.) [4]ಯೇಸು ಮಾನವನಾಗಿರುವುದಕ್ಕಾಗಿ ಕೆಲ ದೈವಿಕ ಗುಣಧರ್ಮಗಳನ್ನು ಬಿಟ್ಟುಬಿಟ್ಟನು (ಫಿಲಿಪ್ಪಿ 2:6, 7; ನೋಡಿರಿ ಮಾರ್ಕ 13:32). ಆತನು ಇನ್ನೂ ಮನಸ್ಸನ್ನು (ಯೋಹನ 2:25), ಮತ್ತು ಇತರರ ಬಗೆಗೆ ಕೆಲ ಅದ್ವಿತೀಯ ಜ್ಞಾನವನ್ನೂ ಅರಿತುಕೊಳ್ಳಲು ಶಕ್ತನು (ಯೋಹಾನ 1:48; 4:17, 18). ಇದ್ದಕಿಂತ ಹೆಚ್ಚಾಗಿ, ಆತನು ಭವಿಷ್ಯವನ್ನು ಬಲ್ಲವನಾಗಿದ್ದಾನೆ (ಯೋಹಾನ 6:71; ಮಾರ್ಕ 8:31). ಆ ಸ್ತ್ರೀಯು ಆ ಊಟಕ್ಕೆ ಬರುತ್ತಾಳೆ ಎಂದು ಆತನು ಮುಂದಾಗಿಯೇ ತಿಳಿದಿದ್ದನು. [5]ನಿಮಗೇನಾದರೂ ಇದಕ್ಕೆ ಸಮಾನವಾದ ಅನಭವಗಳಿದ್ದರೆ, ಅವುಗಳು ಯಾರಿಗೂ ಮುಜುಗರ ಮಾಡದಿದ್ದರೆ ಅದರ ಬಗೆಗೆ ಕೆಲ ವಿವರಗಳನ್ನು ಕೊಡಬಹುದು. [6]ಮನರಂಜನೆ ವಿಷಯಕ್ಕಾಗಿ ನೋಡಿರಿ ಮತ್ತಾಯ 14:6. [7]U.S.ನಲ್ಲೂ ಕೂಡ ಬೇಸಿಗೆಯ ಸಮಯದಲ್ಲಿ ಮನೆಗಳಲ್ಲಿನ ಬಾಗಿಲು ಕಿಡಿಕಿಗಳು (ಯಾವುದೇ ಪರದೆಗಳಿಲ್ಲದೆ), ಸಾಕಷ್ಟು ಗಾಳಿಯನ್ನು ತೆಗೆದು ಕೊಳ್ಳಲು ಪ್ರಯತ್ನಿಸಲು ತೆರೆದಿರುವುಗಳಾಗಿರುವುದನ್ನು ವಯಸ್ಸಾದ ನಮ್ಮಲ್ಲಿ ಕೆಲವರು ನೆನಪಿಡುವವರಾಗಿದ್ದೇವೆ. ಜನರು (ಆಗಂತಕರೂಕೂಡಾ) ಮನೆಯ ಒಳಗೆ ಮತ್ತು ಹೊರಗೆ ತಿರಗಾಡುತ್ತಾ ಇರುವದು ಆ ಸಮಯದಲ್ಲಿ ಬಲು ಸಾಮಾನ್ಯವಾದದ್ದಾಗಿದೆ. [8]ನಮ್ಮಲ್ಲಿ ಎಲ್ಲರೂ ಪಾಪಿಗಳಾಗಿದ್ದೇವೆ (ರೋಮಾಪುರ 3:23), ಆ ಸ್ತ್ರೀಯ ಪಾಪದ ಬಗೆಗೆ ಹೇಳಬೇಕಾದರೆ ನಮ್ಮಲಿನ ಸಾಮಾನ್ಯ ಪಾಪಗಳಂತೆ ಅವಳು ಅವಳದು ಅಲ್ಲ. ಅವಳ ಪಾಪಗಳು ಅವಳನ್ನು ಕುಪ್ರಸಿದ್ಧಳನ್ನಾಗಿದಂಥ ಸ್ವಭಾವವನ್ನು ಹೊಂದಿದ್ದವು. [9]ಇಬ್ಬರು ಸಾಲಗಾರರ ಯೇಸುವಿನ ಸಾಮ್ಯವು ಹೆಚ್ಚು ಕ್ಷಮಿಸಲ್ಪಟ್ಟವನು ಹೆಚ್ಚಾಗಿ ಪ್ರೀತಿಸಲ್ಪಟ್ಟನು ಎಂದು ಬೋಧಿಸುವುದಾಗಿದೆ (ಲೂಕ 7:47). ಆ ಸ್ತ್ರೀಯು ಯೇಸುವಿಗೋಸ್ಕರ ತನ್ನ ಪ್ರೀತಿಯನ್ನು ವ್ಯಕ್ತಪಡಿಸಲು ಆ ಕೋಣೆಗೆ ಪ್ರವೇಶಿಸಿದ ಸಮಯದಲ್ಲಿ, ಅವಳು ಆ ಕೋಣೆಯನ್ನು ಪ್ರವೇಶಿಸುವ ಮುನ್ನವೇ ಅವಳು ಕ್ಷಮಿಸಲ್ಪಟ್ಟಿದ್ದಳು. [10]ಈ ಭಾವನೆಯನ್ನು ನಾನು ಲೂಕ 7:48, 50ನ್ನು ಓದುವಾಗ ಪಡೆದು ಕೊಂಡೆನು.

[11]ಅವಳ ಮಹತ್ವದ ಅವಕಾಶವು ಲೂಕ 7:37ರಲ್ಲಿ "ಪಟ್ಟಣದ" ಇರುವಿಕೆಯ ಮೇಲೆ ಇರುವುದಾಗಿತ್ತು ವಿವರಣೆಗಳು ಇಲ್ಲಿ ಲಭ್ಯವಿಲ್ಲ. ಈ ವಾರದ ಓದುವಿಕೆಯ ಕೆಲಸದಲ್ಲಿ ಯೇಸುವಿನ ಬಗೆಗೆ ಅವಳು ಕಂಡಂಥ ಅಥವಾ ಕೇಳಿದಂಥ ಸಮಯವು ಈ ದೃಷ್ಟಾಂತದಲ್ಲಿ ಕೊಡಲಾಗಿದೆ. [12]ಒಬ್ಬ ಯೆಹೂದಿ ಹುಡುಗಿಯು ಮದುವೆಯಾದಾಗ ಕೂದಲನ್ನು ಕಟ್ಟಿಕೊಂಡ ದಿನದಿಂದ ಆಕೆಯು ಸಾರ್ವಜನಿಕವಾಗಿ ಕೂದಲನ್ನು ಬಿಟ್ಟುಕೊಂಡು ಎಂದಿಗೂ ಕಾಣಿಸಿಕೊಳ್ಳುವುದಿಲ್ಲ. [13]ಸಾಮಾನ್ಯವಾಗಿ ಅಂಥ ಶೀಶೆಯ ಮೇಲಿನ ಭಾಗವನ್ನು ಒಡೆದೇ ಅದರ ಬಾಯನ್ನು ತೆರೆಯ ಬೇಕು. [14]ಪ್ರವಾದಿಗಳು ಹೊಂದಿರುವ ಒಂದು ವರ ಎಂದರೆ ಆತ್ಮದ ಬಗೆಗೆ ಪ್ರಬುದ್ಧತೆಯನ್ನು ಹೊಂದಿರುವದು ಆಗಿದೆ (ನೋಡಿರಿ 1 ಅರಸು 14:1-6). ವಿಶೇಷವಾಗಿ ಇದು ಪ್ರವಾದಿ ಮತ್ತು ಮೆಸ್ಸೀಯನ ವಿಷಯದಲ್ಲಿ ನಿಜವಾದದ್ದು ಆಗಿದೆ (ಯೆಶಾಯ 11:2-4). [15]ರಬ್ಬಿಗಳ ಸಂಪ್ರದಾಯದಂತೆ, ಪಾಪಿಯಾದ ಸ್ತ್ರೀಯನ್ನು ಮುಟ್ಟುವದರ ಮೂಲಕ ಸಂಸ್ಕಾರವನ್ನು ಅಶುದ್ಧಮಾಡಿದ ಹಾಗೆ. [16]"ಬೋಧಕ" ಎಂಬುದು ಅಕ್ಷರ ಸಹ ಗ್ರೀಕ್ ಭಾಷಾಂತರವಾಗಿದೆ. ಯೇಸುವು ದೇವರ ಪ್ರತಿನಿಧಿಯಲ್ಲ (ಅದು, ಆತನು ಪ್ರವಾದಿಯಲ್ಲ) ಎಂದು ಫರಿಸಾಯನು ಯೋಚಿಸಿದ್ದರಿಂದ ಬಹುಶ ಸಿಮೋನನು ವ್ಯಂಗವಾಗಿ ಮಾತನಾಡಲು ಯೇಸುವಿಗೆ ಬಳಸಿದ ಬಿರುದಿನ ಶೀರ್ಷಿಕೆಯಾಗಿದೆ. [17]KJVಯಲ್ಲಿ "ಪೆನ್ನ" ಎಂದಿದೆ. ಕೆಲ ಭಾಷಾಂತರಗಳಲ್ಲಿ "ಶಿಲ್ಲಿಂಗ್" ಅಥವಾ ಇನ್ನೂ ಕೆಲ ಹಣದ ಭಾಷೆಗಳು ಬಳಕೆಯಲ್ಲಿವೆ ಮೂಲ ಭಾಷಾಂತರದಲ್ಲಿ "ದಿನಾರು" ಎಂದಿದೆ. [18]"ದಿನಾರು 17ಯಷ್ಟು ಬೆಲೆಯುಳ್ಳದು" ಇದೊಂದು ಅಸಹಜವಾದ ವ್ಯಾಖ್ಯಾನವಾಗಿದೆ. ಆದರೆ ಅದರ ಅಳತೆಯು ಅನೇಕ ವರ್ಷದ ಹಿಂದಿನ ಕೂಲಿಯ ಮೇಲೆ ಆಧಾರಿತವಾದದ್ದಾಗಿದೆ! 50 ದಿನಾರನ್ನು ಮತ್ತ 500 ದಿನಾರ ಇವನ್ನು ನೀವು ಇರುವೆಡೆಯ ಕೂಲಿಯ ಸಂಬಳಕ್ಕೆ ಹೋಲಿಸಿರಿ. [19]ಒಡೆಯನಾದ ಬೋಧಕನಂತೆ, ಯೇಸು ಹಲವು ಬಾರಿ ತನ್ನ ಕಥೆಯನ್ನು ಹೇಳಿ ಅದರಿಂದ ಹೊರಬರುವ ಸಂಗತಿಗಿಂತ ಅದರ ನೀತಿಯೇನೆಂದು ಹೇಳಿರಿ ಎಂದು ತನ್ನ ಶಿಷ್ಯರಿಗೆ ಕೇಳುತ್ತಿದ್ದನು. ಇದು ಕಲಿಕಾ ಪ್ರಕ್ರಿಯೆಗೆ ಅವಶ್ಯವಾದದ್ದನ್ನು ಯೋಚಿಸಲು ಹಚ್ಚುತ್ತಿತ್ತು. [20]ಸಾಹುಕಾರರ ಮೇಲಿನ ನನ್ನ ವಾಯಖ್ಯಾನವು ಬೈಬಲಿನ ಸಮಯದಲ್ಲಿನ ವಿಶಿಷ್ಯವಾದ ಸಾಹುಕಾರರ ಮತ್ತು ನಲ್ಲಿನ ಬಡ ನೆರೆಯ ಭಾಗಗಳ ಮೇಲೆಕಾರ್ಯಮಾಡುವ ವಿವೇಚನೆಯಿಲ್ಲದ ಸಾಹುಕಾರರ ಮೇಲೆ ಆಧಾರಿತವಾಗಿದೆ. ನೀವು ಬಯಸಿದಲ್ಲಿ ನಿಮ್ಮ ಪ್ರದೇಶಕ್ಕೆ ತಕ್ಕಂತೆ ಪದಗಳನ್ನು ಹೊಂದಿಸಿಕೊಳ್ಳಿರಿ. (ಅವಶ್ಯವಾದ ಹಣವನ್ನು ಒಬ್ಬ ಸಾಹುಕಾರ ವ್ಯಕ್ತಿಯಿಂದ ಪಡೆಯುವದು ನೀವಿರುವೆಡೆ ಸಾಮಾನ್ಯ ಅಭ್ಯಸ ಆಗಿರಬಹುದು.) ಯೋಗ್ಯವೆನಿಸಿದ್ದೇ ಆದರೆ ನಾನು ವರ್ಣಿಸಿದ ಸಾಹುಕಾರನ ತರದ ಕೆಲಸಮಾಡುವುದರ ವಿರುದ್ಧ ನೀವು ಎಚ್ಚರಿಕೆಯನ್ನು ಕೊಡಬಹುದು.

[21]ಯೇಸುವಿನ ಸಾಮ್ಯದಲ್ಲಿ, ಆತನು ಸಾಮಾನ್ಯವಾಗಿ ನಿಜವಾಗಿ ಇರುವುದನ್ನೇ

ಮಾತನಾಡುತ್ತಿದ್ದನು. ಯಾವಾಗಲೊಮ್ಮೆ ಆತನ ಉದಾಹರಣೆಗಳು ನಯಮಗಳಿಂತಲೂ ಮೀರಿದವು ಆಗಿರುತ್ತಿದ್ದವು (ನೋಡಿರಿ ಮತ್ತಾಯ 20:12). [22]Alfred, Lord Tennyson, *Geraint and Enid;* quoted in W. Emery Barnes, *The Forgiveness of Jesus Christ* (New York: Macmillan Co., 1936), 53. [23]Adapted from James Burton Coffman, *Commentary on Luke* (Austin, Tex.: Firm Foundation Publishing House, 1975), 147. [24]ಸಾಮ್ಯಗಳ ಹೆಚ್ಚಳ ವಿವರವಾ ಅಭ್ಯಾಸವು ನಂತರದ ಪುಸ್ತಕವಾದ *ಕ್ರಿಸ್ತನ ಜೀವನ ಚರಿತ್ರೆ, 3* ಸಿಕ್ಕುವದು. [25]ಹೋಲಿಕೆಯಿಲ್ಲ ಇನ್ನೊಂದು ಎಂದರೆ, ಸಾಮ್ಯದಲ್ಲಿ (ಐವತ್ತು ದಿನಾರಿ ಸಾಲ?) ಕ್ಷಮಿಸಲ್ಪಟ್ಟಿರುವುದನ್ನು ಸಿಮೋನಿಗೆ ಬೋಧಿಸಲು ಹೋಗದಿರುವುದೇ ಆಗಿದೆ. ಈ ಸಾಮ್ಯದ ವಿವರಗಳು ಒತ್ತಿ ಹೇಳಲ್ಪಟ್ಟಿಲ್ಲ. [26]Warren W. Wiersbe, *The Bible Exposition Commentary,* vol. 1 (Wheaton, Ill.: Victor Books, 1989), 198. (Emphasis his.) [27]William Barclay, *The Gospel of Luke,* rev. ed., The Daily Study Bible Series (Philadelphia: Westminster Press, 1975), 95. [28]ಅವರು ಈ ಪದಗಳನ್ನು ಕೇವಲ ಯೋಚಸಿದರೋ ಅಥವಾ ತಮ್ಮಲ್ಲಿ ಪ್ರತಿಯೊಬ್ಬರಲ್ಲಿ ಪಿಸುನುಡಿದರೋ ಎಂಬುದರ ಬಗ್ಗೆ ವೇದಭಾಗವು ಸ್ಪಷ್ಟವಾಗಿಲ್ಲ. [29]ತಿರುಗಿ ಯೇಸು ದೇವರೊಂದಿಗಿನ ಸಮಾನತೆಯನ್ನು ಪ್ರತಿಪಾದಿಸುತ್ತಿದ್ದಾನೆ (ನೋಡಿರಿ ಮಾರ್ಕ 2:5-12). [20]ಗ್ರೀಕ್ ವಿಶೇಷಣವು ವಚನ 50ರಲ್ಲಿ "ಒಳಗೆ" ಎಂದು ಸೂಚಿಸಿದ್ದು ಇದರ ಅಕ್ಷರಸಹ ಅರ್ಥವು ಒಳಕ್ಕೆ ಎಂದಾಗಿದೆ.

[31]ನನ್ನ ಸ್ಥಳದಲ್ಲಿ "ಮೊದಲು ಸ್ವಗತದ ಮ್ಯಾಟನ್ನು ಹೊರಗೆ ಹಾಕಿರಿ" ಎಂದು ಬಳಸಲಾಗುತ್ತದೆ.